# ಮುಂದುವರಿದ ಸುವಾರ್ತಾ ಸಂರಕ್ಷಣೆ

ಈ ಭಾಗದ ಎಂ.ಟಿ.ಪಿ.ಯನ್ನು ಶಿಷ್ಯರು ಸುವಾರ್ತೆಯನ್ನು ಸಂರಕ್ಷಿಸುವುದು ಹೇಗೆ ಎಂದು ತರಭೇತಿಯನ್ನು ನೀಡಲಾಗುತ್ತದೆ. ಬೇರೆ ಬೇರೆ ಧರ್ಮಗಳ ತತ್ವಗಳು, ಸಿದ್ಧಾಂತಗಳು ಮತ್ತು ಗುಂಪುಗಳ ಬಗ್ಗೆ ಅರ್ಥಮಾಡಿಕೊಂಡು ಸುವಾರ್ತೆಯನ್ನು ಅವರಿಗೆ ಹೇಗೆ ಪ್ರಕಟಿಸಬೇಕೆಂದು ಕಲಿಯಲಾಗುತ್ತದೆ.

ನಾವು ಇಸ್ಲಾಂ ಮತ್ತು ಹಿಂದು ಧರ್ಮಗಳ ಬಗ್ಗೆ ಚರ್ಚಿಸಲಿದ್ದೇವೆ. ನಾಸ್ತಿಕರನ್ನು ಹೇಗೆ ಮನವೊಲಿಸಬೇಕೆಂದೂ ಸಹ ಕಲಿಯಲಿದ್ದೇವೆ.

ಪಂಗಡಗಳು : ಕ್ಯಾಥೋಲಿಸಮ್, ಕರಿಸ್ಮಾಟಿಸಮ್ / ಪೆಂಟಕಾಸ್ಟಲಿಸಮ್ ಮಾರ್ಮನ್ಸ್ ಸೆವೆನ್ತ್ ಡೆ ಅಡ್‌ವೆನ್‌ಟಿಸ್ಟ್ ಜೆಹೋವಾಸ್ ವಿಟ್‌ನೆಸಸ್.

## *ಧರ್ಮಭ್ರಷ್ಟತೆ :*

1 ತಿಮೋಥಿ 4:1-3 : ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗಿ ಮರುಳುಗೊಳಿಸಿ ಮದುವೆಯಾಗಬಾರದೆಂತಲೂ ಇಂಥಿಂಥ ಆಹಾರವನ್ನು ತಿನ್ನ ಬಾರದೆಂತಲೂ ಹೇಳುವರು.

2 ತಿಮೋಥಿ 4 : 3-4 : ಯಾಕೆಂದರೆ ಜನರು ಸ್ವಸ್ಥ ಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ. ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟುಕೊಳ್ಳುವರು. ಅವರು ಸತ್ಯಭೋದನೆಗೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವುದಕ್ಕೆ ಹೋಗುವರು''.

ಅಪೋಸ್ತಲರ ಕೃತ್ಯಗಳು : 20:29-31 : ''ನಾನು ಹೋದಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವದೆಂದು ನಾನು ಬಲ್ಲೆನು. ಅವು ಹಿಂಡನ್ನು ಕನಿಕರಿಸುವುದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಭೋದನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು.''

1 ಕೊರಿಂಥದವರು 1:10-13

# ಕ್ಯಾಥೋಲಿಸಮ್

ಬೈಬಲ್ + ಕ್ಯಾಟಕಿಸಮ್
''ವಾಕ್ಯಗಳು ಮತ್ತು ಸಂಪ್ರದಾಯಗಳು ಎರಡನ್ನೂ ಒಪ್ಪಿಕೊಂಡು ಗೌರವಿಸಿ ಭಯ ಭಕ್ತಿಯಿಂದ ನಡೆದುಕೊಳ್ಳಬೇಕು''.

| ಕ್ಯಾಥೋಲಿಕ್‌ನವರ ಹೇಳಿಕೆ : | ಬೈಬಲಿನ ಸತ್ಯ: |
|---|---|
| ಸಾಧಾರಣ ವ್ಯಕ್ತಿಯಿಂದ ಬೈಬಲನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. | ಯೋಹಾನ 8 : 31-32, ಅಪೋಸ್ತಲರು 17:11, ಎಫೇಸ್ಸೆಯರು 3:3-5, 5:17 1ತಿಮೋಥಿ 2:4. |
| ಬೈಬಲ್ ಮತ್ತು ಸಂಪ್ರದಾಯಗಳನ್ನು ಪಾಲಿಸಿದರೆ ರಕ್ಷಣೆ ಹೊಂದಲು ಸಾಧ್ಯ. | ಮತ್ತಾಯ 15:7-9, ಯೋಹಾನ 16:13, 2 ತಿಮೋಥಿ 3:16-17, 2ಪೇತ್ರ1:21, 1ಕೊರಿಂಥದವರು 2:13. |
| | ಬೈಬಲ್ ಬಹಳ ಸ್ಪಷ್ಟವಾಗಿದೆ. (ಯೋಹಾನ 10:35, ಮತ್ತಾಯ 22:23-44, ಗಲಾತ್ಯದವರಿಗೆ 1:6-9, 2ಯೋಹಾನ 9) |
| ಸಭೆಗೆ ಪೋಪನು ಕಣ್ಣಿಗೆ ಕಾಣುವ ತಲೆಯಾಗಿದ್ದಾನೆ. | ಬೈಬಲ್ಲಿನ ಸಂದೇಶವನ್ನು ಅರ್ಥ ಮಾಡಿಕೊಳ್ಳದೆ ಮತ್ತು ಪ್ರತಿಕ್ರಿಯೆ ತೋರಿಸದೆ ರಕ್ಷಣೆ ಹೊಂದಲು ಸಾಧ್ಯವಿಲ್ಲ. (ಲೂಕಾ 6:46, ಯೋಹಾನ 8:31-32, ಇಬ್ರಿಯರಿಗೆ 2:9,5:9, 2 ಪೇತ್ರ 1:22. |
| | ಯೇಸು ಕ್ರಿಸ್ತನು ಮಾತ್ರ ಸಭೆಗೆ ತಲೆಯಾಗಿದ್ದಾನೆ ಮತ್ತು ಎಲ್ಲಾ ಕ್ರೈಸ್ತರು ಆತ್ಮೀಯ ಶರೀರದಲ್ಲಿ ಸದಸ್ಯರಾಗಿದ್ದಾರೆ. (ಎಫೇಸ್ಸೆಯರಿಗೆ 1:22-23, ಕೊಲೆಸ್ಸೆಯರಿಗೆ 1:18-24) |
| ಪೋಪನ್ನು ಕೈ ಮುಗಿಯುವ ಮೂಲಕ ಮತ್ತು ಉಂಗುರವನ್ನು ಮುತ್ತು ಕೊಡುವ ಮೂಲಕ ಆರಾಧಿಸಬೇಕು. | ಪೌಲನು ತನ್ನನ್ನು ಆರಾಧಿಸುವುದಕ್ಕೆ ನಿರಾಕರಿಸಿದನು (ಅಪೋಸ್ತಲರು 14:11-15) ಹಾಗೆ ದೇವ ದೂತರೂ ಸಹ ಮಾಡಿದರು (ಪ್ರಕಟಣೆಗಳು 22:8-9) |

| | |
|---|---|
| ಕಲ್ಲುಬಂಡೆಯಾದ ಪೇತ್ರನ ಮೇಲೆ ಸಭೆಯು ಕಟ್ಟಲ್ಪಟ್ಟಿತು. | ಯೇಸುವೇ ಆ ಕಲ್ಲು ಬಂಡೆ (2 ಕೊರಿಂಥ ಧವರು 3:11, 2 ಪೇತ್ರ 2:4-8) |
| ಪೇತ್ರನೇ ಮೊದಲನೆಯ ಪೋಪ್ ಆಗಿದ್ದನು. | ಮೊದಲನೆಯ ಶತಮಾನದಲ್ಲಿ ಪೇತ್ರನನ್ನು ಈ ರೀತಿಯಾಗಿ ನೋಡಿದ್ದರು ಎಂಬುದಕ್ಕೆ ಸಾಕ್ಷಿಗಳಿಲ್ಲ. ಎಲ್ಲಾ ಸಭೆಯಲ್ಲೂ ಪೇತ್ರನ ಪ್ರಭಾವಕ್ಕಿಂತ ಪೌಲನ ಪ್ರಭಾವವು ಹೆಚ್ಚಾಗಿತ್ತು. ಪೌಲನು ಜೆಂಟೈಲ್ಯರಿಗೆ ಅಪೋಸ್ತಲನಾಗಿದ್ದನು. ಅದು ಹೆಚ್ಚು ಜನರನ್ನು ಒಳಗೊಂಡಿತ್ತು. ಪೇತ್ರನು 2 ಪುಸ್ತಕಗಳನ್ನು ಬರೆದರೆ ಪೌಲನು 13 ಪುಸ್ತಕಗಳನ್ನು ಬರೆದಿದ್ದಾನೆ. (ರೋಮನ್ ಸಭೆಗೂ ಸೇರಿಸಿ). |
| ಯಾಜಕತನಕ್ಕೆ ಅಪೋಸ್ತಲರಯಶಸ್ವಿಯೇ ಕಾರಣ. | ಅಪೋಸ್ತಲರು 1: 21,22ರ ಅರ್ಹತೆಯಿಂದಾಗಿ ಅಪೋಸ್ತಲರ ಸ್ಥಾನವನ್ನು ಸಂಪಾದಿಸುವುದು ಅಸಾಧ್ಯವಾಗಿದೆ. |
| ವಿಶೇಷವಾದ ಪಾದ್ರಿ ಮಾತ್ರ ಯಾಜಕ. | ಎಲ್ಲಾ ಕ್ರೈಸ್ತರು ಯಾಜಕರು 1ಪೇತ್ರ 2:5-9. |
| ಅಸಾಧಾರಣವಾದ ಆತ್ಮೀಯ ಜನರೇ ಸಂತರಾಗುವರು. (ಸತ್ತನಂತರ ಅದನ್ನು ತೀರ್ಮಾನಿಸಲಾಗುವುದು) | ಎಲ್ಲಾ ಕೈಸರು ಸಂತರು, (ರೋಮಾಪುರ 1:7,15:25-26). |
| ಮೇರಿ ಕೊನೆಯವರಿಗೆ ಕನ್ಯೆಯಾಗಿದ್ದಳು. | ಅವರಿಗೆ ಬೇರೆ ಮಕ್ಕಳಿದ್ದರು ಮಾರ್ಕನು 3:32, 6:3. |
| ಅವರು ಯಾವ ಪಾಪ ಕೂಡ ಮಾಡಲಿಲ್ಲ. | ಅವರು ಎಲ್ಲಾ ಮನುಷ್ಯರ ಹಾಗೇಯೇ ಸಾಧಾರಣವಾಗಿ ಪಾಪಿಯಾಗಿದ್ದರು. (ರೋಮಾಪುರ 3:23) ಒಮ್ಮೆ ಯೇಸುವಿನ ವಿಶ್ವಾಸ ಮತ್ತು ಗುರಿಯ ವಿಷಯದಲ್ಲಿ ಬಲಹೀನರಾಗಿದ್ದರು. (ಮಾರ್ಕನು 3:2-22 31-35) |
| ಮಗುವಿನ ಧೀಕ್ಷಸ್ನಾನ ಮತ್ತು ಪೂರ್ವಿಕರ ಪಾಪದ ಸಿದ್ಧಾಂತವನ್ನು 3ನೇ ಶತಮಾನದಲ್ಲಿ ಇರೇನಿಯಸನು ಕಲಿಸಿದನು. ಅದಾದನಂತರ | ಧೀಕ್ಷ ಸ್ನಾನವು ಯಾವಾಗಲು ವಿಶ್ವಾಸ ಮತ್ತು ಮಾನಸಾಂತರವನ್ನು ಒಳಗೊಂಡಿತ್ತು. (ಅಪೋಸ್ತರು 2:38, ಗುಲಾತ್ಯದವರಿಗೆ 3:26-27). |

| | |
|---|---|
| ಟೆರ್ಟುಲಿಯನ್ ಅದನ್ನು ಅಭಿವೃದ್ಧಿಗೊಳಿಸಿದನು (16-220) ನಂತರ ಸಿಪ್ರಿಯನ್ ಎಂಬುವನು ಮಗುವಿನ ಧೀಕ್ಷಸ್ನಾನದ ಉತ್ತರ್ವನ್ನು ಕಂಡು ಹಿಡಿದನು. ಆದರೆ 5ನೇ ಶತಮಾನದವರೆಗೂ ಮಗುವಿನ ಧೀಕ್ಷಸ್ನಾನವನ್ನು ಜಾರಿಗೆ ತರಲಿಲ್ಲ. | |
| ತೃಪ್ತಿ ಪಡಿಸುವಿಕೆ : ಪಾಪದ ಕ್ಷಮಾಪಣೆಯನ್ನು ಹಣಕ್ಕಾಗಿ ಮಾರಲಾಗಿತ್ತು. | ದೇವರ ದಯೆಯಿಂದ ನಾವು ಕ್ಷಮಿಸಲ್ಪಟ್ಟಿದ್ದೇವೆ. |
| ಪಾಪಕ್ಕಾಗಿ ಮರಣಾನಂತರದ ಪ್ರಾಯಶ್ಚಿತ್ತದ ಸ್ಥಳ. | ಕ್ರಿಸ್ತ ಯೇಸುವಿನಲ್ಲಿರುವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ. (ರೋಮಾಪುರ 8:1), ನಮ್ಮ ಪಾಪಗಳು ನಿರಂತರವಾಗಿ ಶುದ್ಧೀಕರಿಸ್ಪಡುತ್ತದೆ. (ಯೋಹಾನ 1:7-9) ಅದಾದ ಮೇಲೆ ಮರಣದ ನಂತರ ನ್ಯಾಯ ತೀರ್ಪು (ಇಬ್ರಿಯರಿಗೆ 9:27-28). |
| ದ್ರವ್ಯಾಂತರ ಮಾಡು : ರೊಟ್ಟಿ ಮತ್ತು ದ್ರಾಕ್ಷಾರಸವು ಯೇಸುವಿನ ದೇಹ ಮತ್ತು ರಕ್ತವಾಗಿ ಮಾರ್ಪಡುವುದು.<br>ಪೆನಾನ್ಸ್ : ವ್ಯಕ್ತಿಯು ಪಾಪವನ್ನು ಯಾಜಕನಿಂದ ಮಾತ್ರ ಕ್ಷಮಿಸಲು ಸಾಧ್ಯ (ಮತ್ತಾಯ 16:19, ಮತ್ತಾಯ 18:18) | ಪರಿಶುದ್ಧ ಆತ್ಮನು ದೇವರು ಸ್ವರ್ಗದಲ್ಲಿ ನಿರ್ಧರಿಸಿದ್ದನ್ನು ಅಪೋಸ್ತಲರ ಮೂಲಕ, ನಾಯಕರ ಮೂಲಕ ತೀರ್ಮಾನವನ್ನು ಕೈಗೊಳ್ಳುವರು. |
| ವೈರಾಗ್ಯ: ಯಾಜಕರು ಮದುವೆಯಾಗುವಂತಿಲ್ಲ. ಪೇತ್ರನು ಹೆಂಡತಿಯನ್ನು ಬಿಟ್ಟಿದ್ದನು. | ಕೋಲೆಸ್ಸೆಯರಿಗೆ 2:20-23, 1ತಿಮೋಥಿ 4:1-5, 1ಕೊರಿಂಥ7:1-5 (ಮದುವೆ ಜವಾಬ್ದಾರಿ) 1ಕೊರಿಂಥ9:1-5(ಯಾತ್ರೆಯಲ್ಲಿ ತನ್ನ ಹೆಂಡತಿಯ ಜೊತೆಯಲ್ಲಿದ್ದಳು). |

ನಮ್ಮ ಹೃದಯಮತ್ತು ಜೀವನದಲ್ಲಿ ಯೇಸುವಿನ ಉಪದೇಶವನ್ನು ಸೀಕರಿಸುವುದು.

# ಪ್ರಾಟೆಸ್ಟೆಂಟ್

ಕ್ರಿ.ಶ. 150 ರಲ್ಲಿ ಯಾಜಕತನ ಎಂಬುದು ಅಭಿವೃದ್ಧಿ ಹೊಂದಿತು. ಯೇಹೊದ್ಯರ ಯಾಜಕತನವಾದ ನಂತರ ಪಾದ್ರಿ ಮತ್ತು ಸಾಮಾನ್ಯ ಜನರ ನಡುವೆ ವ್ಯಾತ್ಯಾಸವನ್ನು ತೋರಿಸಲು ಇದನ್ನು ಪ್ರಾರಂಭಿಸಲಾಯಿತು. ಬಿಷಪ್ಪರು ಮಹಾಯಜಕರಾಗಿದ್ದರು. ಹಿರಿಯರು ನಿಯಮಿತ ಯಾಜಕರಾಗಿದ್ದರು. ಡೀಕನ್ನರು ಲಿವೈಟ್ಸ್ ತರಹ ಇದ್ದರು.

**ಆಗಸ್ಟಿನ್ ಕ್ಯಾಥೋಲಿಕ್ ಸಭೆಯ ತಂದೆ :** ಅವರ ಉಪದೇಶಗಳು ಬೇರೆ ಬೇರೆ ಸಿದ್ಧಾಂತಗಳ ಹುಟ್ಟುವಿಕೆಗೆ ದಾರಿ ಮಾಡಿಕೊಟ್ಟಿತು. ಮೊಟ್ಟಮೊದಲಿನ ಪಾಪ, ಮಗುವಿನ ದೀಕ್ಷಸ್ನಾನ, ಪಾದ್ರಿಗಳ ಬ್ರಹ್ಮಚರ್ಯ, ದೇವರ ವಾಕ್ಯಗಳನ್ನು ಮತ್ತು ಸಂಪ್ರದಾಯಗಳನ್ನು ಸಭೆಯು ಒಪ್ಪಿಕೊಳ್ಳಬೇಕು. ಅವರು ಒಮ್ಮೆ ಹೀಗೆ ಹೇಳಿದ್ದರು **''ಕ್ಯಾಥೋಲಿಕ್ ಸಭೆಯ ಅಧಿಕಾರಿಗಳಿಂದ ನಾನು ಪ್ರೇರಣೆ ಹೊಂದದಿದ್ದರೆ ನಾನು ಸುವಾರ್ತೆಯಲ್ಲಿ ವಿಶ್ವಾಸವಿಡುವುದಿಲ್ಲ.**

ಕೆಲವು ಘಟನೆಗಳು

| ಕ್ರಿ. ಶ. | ಘಟನೆಗಳು |
|---|---|
| 160 | **ಈಸ್ಟರ್ ಹಬ್ಬವನ್ನು ಆಚರಿಸಲಾಯಿತು (ರೋಮ್)** |
| 180 | ಸಂಪ್ರದಾಯದ ಅಧಿಕಾರವನ್ನು ಎತ್ತಿ ಹಿಡಿದದ್ದು. |
| 200 | ಯಾಜಕರು |
| ರಿಂದ | ಕರ್ತನ ಭೋಜನದ ಮೇಜು ಯಜ್ಞವೇದಿಕೆಯಾಯಿತು. ಮೊದಲನೆಯ |
| 300 | ಸನ್ಯಾಸಿಗಳು |
| 232 | ಮೊದಲನೆಯ ಸಭೆಯ ಕಟ್ಟಡ |
| 300 | ಕ್ಯಾಂಡಲ್‌ಗಳು |
| ರಿಂದ | ಕರ್ತನ ಭೋಜನವು ವಿಚಿತ್ರ ದೃಷ್ಯವಾಗಿ ಮಾರ್ಪಟ್ಟಿತು. |
| 400 | |
| 310 | ಕ್ರೈಸ್ತ ಧರ್ಮವು ಕಾನೂನು ಬದ್ಧವಾಯಿತು. |
| 325 | ನಿಸಿಯ ಎಂಬ ಮಂಡಲದ ಸ್ಥಾಪನೆ.<br>ರಾಜ್ಯದಲ್ಲಿ ಸಭೆಯ ವಿಂಗಡಣೆ.<br>ಒಂದು ನಗರಕ್ಕೆ ಒಬ್ಬ ಬಿಷಪ್, ರೋಮನ್ ರಾಜರ ಕೆಳಗೆ ಬಿಷಪ್‌ಗಳು. |
| 337 | 40 ದಿನ ಅನುತಾಪ ಹಾಗೂ ಉಪವಾಸ ವ್ರತವನ್ನಾಚರಿಸುವ ಅವಧಿ (ಲೆಂಟ್ ಡೇಸ್) |
| 350 | ಪರಿಶುದ್ಧ ದಿನಗಳು : (ಕ್ರಿಸ್‌ಮಸ್, ಪೆಂಟಿಕೋಸ್ಟ್, ಮತ್ತು ಪುನರುತ್ಥಾನದ ದಿನ) |
| 381 | ಕ್ರೈಸ್ತ ಧರ್ಮವು ಅಧಿಕಾರಕ್ಕೆ ಬಂದು ಪ್ರಾಮುಖ್ಯತೆ ಪಡೆಯಿತು. ಕ್ರಿಸ್ತನಲ್ಲಿ ನಂಬಿಕೆಯಿಲ್ಲದವರು ಸಭೆಯಲ್ಲಿ ಬಂದು ತುಂಬಿಕೊಂಡರು. ರೋಮನ್ ರಾಜರ ಆಡಳಿತಕ್ಕೆ ಸಭೆಯು ಒಳಪಟ್ಟಿತು. |
| 382 | ರೋಮ್‌ನ ಬಿಷಪ್ಪರು ಹೆಚ್ಚು ಅಧಿಕಾರದ ಹಕ್ಕನ್ನು ಕೇಳಿದರು. |
| 450 | ಪಾದ್ರಿಯ ಉಡುಪು. |
| 476 | ರೋಮನ್ ರಾಜ್ಯ ಬಿದ್ದು ಹೋಯಿತು. ಕ್ಯಾಥೋಲಿಕ್ ಸಭೆಯ ಕತ್ತಲೆಯ ವರ್ಷಗಳು. |
| 606 | ರೋಮ್ ದೇಶದ ಮೊದಲನೆಯ ಬಿಷಪ್ ಬೋನಿಫೇಸ್2 ಪ್ರಪಂಚಾದ್ಯಂತ ಅಧಿಕಾರದ ಹಕ್ಕು ಪಡೆದು ಪೋಪ್ ಆದರು. |

1000 ತೃಪ್ತಿ ಪಡಿಸುವುಕೆ

1054 ರೋಮನ್ ಕ್ಯಾಥೋಲಿಕ್ ಮತ್ತು ಈಸ್ಟರ್ನ್ ಆರ್ತಡಾಕ್ಸ್ ನಡುವೆ ವಿಂಗಡಣೆ.

1215 ದ್ರವ್ಯಾಂತರ ಮಾಡುವುದನ್ನು ಒಪ್ಪಿಕೊಳ್ಳಲಾಯಿತು.

1546 ಕ್ಯಾಥೋಲಿಕ್ ಸಭೆಯ ಅಪೋಕ್ರಿಪಾವನ್ನು ದೇವರ ವಾಕ್ಯಗಳು ಎಂದು ಒಪ್ಪಿಕೊಂಡು ಬೈಬಲಿನಲ್ಲಿ ಸೇರಿಸಿಕೊಂಡಿತು.

1854 ಪವಿತ್ರ ಗರ್ಭಧಾರಣೆಯ ಸಿದ್ಧಾಂತ

1870 ಪೋಪ್ ಎಂದಿಗೂ ತಪ್ಪು ಮಾಡುವುದಿಲ್ಲ.

## *ಪ್ರಾಟಸ್ಟಂಟ್‌ನವರ ಪ್ರತಿಕ್ರಿಯೆ : ಸುಧಾರಣೆಗೆ ಕೂಗು*

ಕೆಥೋಲಿಕ್ ಸಭೆಯಲ್ಲಿನ ಹಣದ ಚಟುವಟಿಕೆಗಳು ಬಹಳ ದೊಡ್ಡ ಸಮಸ್ಯೆಯಾಗಿ ಮಾರ್ಪಟ್ಟಿತ್ತು. ಅದರಲ್ಲೂ ಹೆಚ್ಚೆಚ್ಚಾಗಿ ಅಸತ್ಯ ಭೋದನೆಗಳನ್ನು ಕಲಿಸತೊಡಗಿದರು. ಸಭೆಯ ಕಚೇರಿಗಳನ್ನು ಹೆಚ್ಚು ಹೆಚ್ಚು ಹಣಕ್ಕೆ ಮಾರಿದರು, ಇದು ಒಂದು ಕೃಪೆ. ಬ್ರ್ಯಾಂಡ್‌ನ್‌ಬರ್ಗ್‌ನ ರಾಜಕುಮಾರ ಆಲ್ಬೈಟವರು ಪೋಪ್ ಲಿಯೋ ಎಕ್ಸ್ ಯವರಿಗೆ ಸುಮಾರು $500,000 ಮೂರನೆಯ ಕಚೇರಿಗೆ ಕೊಟ್ಟಿದರು. ತೃಪ್ತಿಪಡಿಸೋಣ ಜರ್ಮನಿಯಲ್ಲಿ ತೃಪ್ತಿಪಡಿಸಲು ಕೋಪದ ಮಾರ್ಟಿನ್ ಲೂತರನ್ನು ಎಚ್ಚರಿಸಿದರು, ಇದು ಮನಸ್ಸು ಕರಗಿಸುವ ಬಹು ಪ್ರಾಮುಖ್ಯತದ ಸಂಖ್ಯೆಯ ಆಸಕ್ತಿಯ ಸುಧಾರಣೆಯಾಗಿತ್ತು.

ಮಾರ್ಟಿನ್ ಲೂತರ್ : ಆಕ್ಟೋಬರ್ 31, 1517ರಲ್ಲಿ ವಿಟನ್‌ಬರ್ಗ್‌ನಲ್ಲಿ ಅವನ ಸಭೇಯ ಬಾಗಿಲಿಗೆ ಅವನ 95 ಪ್ರಬಂಧಗಳನ್ನು ಬರೆದು ಹಾಕಿದನು. ಈ ಕಾಗದ ಪತ್ರದಲ್ಲಿ ಅದನ್ನು ತೃಪ್ತಿ ಪಡಿಸುವ ಮಾರಾಟದ ಬಗ್ಗೆ ವಿರುದ್ಧವಾಗಿ ವಿವರಿಸಿದ ಮತ್ತು ಯಾರು ಈ ವಿಷಯಕ್ಕೆ ಒಮ್ಮೆ ತಕ್ಕೆ ಬರಲು ತಿರಸ್ಕರಿಸುವವರಿಗೆ ಒಂದು ಚರ್ಚೆಯನ್ನು ಏರ್ಪಡಿಸಿದ. ಅಂತಿಮದಲ್ಲಿ ಕೆಥೋಲಿಕ್ ಸಭೆಯು ಲೂತರ್ ಎದುರಾಗಿ ಪಪ್ಪಲ್‌ಬುಲ್‌ಅನ್ನು ಪ್ರಕಟಿಸಿದರು. ಲೂತರನು ಇದನ್ನು ಬಹಿರಂಗವಾಗಿ ಸುಟ್ಟು ಹಾಕಿದನು. ಅವನು ಈ ಚಳುವಳಿಯನ್ನು ಅಭಿವೃದ್ಧಿಗೊಳಿಸಿದ, 1526ರಲ್ಲಿ ''ಪ್ರಾಟಸ್ಟಂಟ್'' ಎಂದು ಹೆಸರಿಟ್ಟನು. ಏಕೆಂದರೆ ಈ ಸಭೆಯನ್ನು ಕೆಥೋಲಿಕ್ ಸಭೆಯವರು ವಿರೋದಿಸಿದರು. ಆದಾಗ್ಯೂ ಅವನ ಹೆಸರಿನ ಮೇಲೆ ಸಭೆಯನ್ನು ಆರಂಭಿಸುವ ಆಸೆಗಳು ಇರಲಿಲ್ಲ ಎಂದು ಹೇಳಿದ, ಆದರೆ ಅವನ ಚಳುವಳಿಯೇ ''ಲೂತರ್ ಸಭೆ '' ಯಾಗಿ ಪ್ರಸಿದ್ಧವಾಯಿತು ಮತ್ತು ಜರ್ಮನಿಯಿಂದ ಅನೇಕ ರಾಜ್ಯಗಳಿಗೆ ಬಹು ಬೇಗನೇ ಹರಡಿಕೊಂಡಿತು. (''ಲೂತರ್ ಹೆಸರಿನ ಮೇಲಿನ ಸಭೆಯು 1ಕೊರಿಂಥದವರಿಗೆ 1:10-13 ವಚನವು ನೇರವಾಗಿ ವಿರೋದಿಸುತ್ತದೆ.

1700ರಲ್ಲಿ ಪ್ರಾಟಸ್ಟಂಟ್ ಗುಂಪು ಸುಮಾರು 150 ಎದರು ಗುಂಪುಗಳಾಗಿ ವಿಂಗಡವಾಯಿತು,

ಅಸತ್ಯ ಭೋದನೆಗಳು :

1. ಮಗು ದೀಕ್ಷಾಸ್ನಾನ :

ಪ್ರಾಟಸ್ಟಂಟ್ ಗುಂಪುಗಳಾದ ಮೆಥಡಿಸ್ಟ್ ಪ್ರೆಸ್‌ಬಿಟೇರಿಯನ್ಸ್ , ಆ್ಯಂಗ್ಲಿಕನ್ಸ್ ಮತ್ತು ಎಪಿಸ್‌ಕೋ ಪ್ಯಾಲೆಯನ್ಸ್ ಇದನ್ನು ರೂಡಿ ಮಾಡಿಕೊಂಡರು. ಕೊಲೊಸ್ಸೆವರಿಗೆ 2:12 ರಲ್ಲಿ ಸ್ಪಷ್ಟವಾಗಿ ಯಾರಿಗೆ ದೀಕ್ಷಾಸ್ನಾನ ಹೊಂದ ಬೇಕೋ ಅವರು ಸಾಮಾರ್ಥ್ಯವಾಗಿ ನಂಬಿಕೆಯಿಡುವುದರ ಮೂಲಕ ದೀಕ್ಷಾಸ್ನಾನ ಹೊಂದ ಬಹುದೆಂದು ತಿಳಿಸಿದೆ.

ಪ್ರಾಟಸ್ಟಂಟ್ ಗುಂಪಿನವರು ತಮ್ಮದೇ ಅಧಿಕಾರದಲ್ಲಿ ಮಗು ದೀಕ್ಷಾಸ್ನಾನವನ್ನು ಹಳೇ ಒಡಂಬಡಿಕೆಯ ಸುನ್ನತಿಗೆ ಹೋಲಿಕೆ ಮಾಡಿದ್ದಾರೆ.

ಸುನ್ನತಿ ಮಾಡುವುದು ಯೇಹೂದ ಜನಾಂಗದವರು, ಆದರೆ ದೀಕ್ಷಾಸ್ನಾನ ಎಲ್ಲ ಜನಾಂಗದವರಿಗೆ, ಮತ್ತಾಯ 28:18-20.

ಸುನ್ನತಿ 8 ದಿನದ ಮಗುವಿಗೆ ಯೆಹೂದ ಜನಾಂಗದವರು ಮಾಡಿಸುತ್ತಾರೆ. ಆದರೆ ದೀಕ್ಷಾಸ್ನಾನವು ಯಾರು ಹಳೇಯ ಜೀವನವನ್ನು ಬಿಟ್ಟು ನಂಬಿಕೆಯನ್ನು ಇಟ್ಟು ಮನಸಾಂತರ ಹೊಂದುತ್ತಾರೆಯೋ ಅವರಿಗೆ.

ಸುನ್ನತಿ ಮಾಡುವುದು ಗಂಡುಗಳಿಗೆ, ಆದರೆ ದೀಕ್ಷಾಸ್ನಾನವು ಗಂಡು ಹೆಣ್ಣುಗಳಿಬ್ಬರಿಗೂ.

ಸುನ್ನತಿ ಮಾಡಿಸಿಕೊಂಡವರು ಕಾನೂನಿಗೆ ಬದ್ಧವಾಗಿದ್ದಾರೆ. ಸುನ್ನತಿ ಮಾಡುವುದಕ್ಕೂ ಪಾಪಗಳ ಕ್ಷಮಾಪಣೆಗೂ ಯಾವ ರೀತಿಯಾದ ಸಂಭಂದವೂ ಇಲ್ಲ. ಆದರೆ ದೀಕ್ಷಾಸ್ನಾನಕ್ಕೆ ಕಾನೂನು ಇಲ್ಲ (ಗಲಾತ್ಯದವರಿಗೆ 3:24-29) ಸುನ್ನತಿ ಮಾಡಿಸುವುದು, ಯಾವ ರೀತಿಯಿಂದಲೂ ಶಿಲುಬೆಗೆ ಸಂಭಂಧಿಸುವುದಿಲ, ಆದರೆ ದೀಕ್ಷಾಸ್ನಾನವು ಕ್ರಿಸ್ತನಲ್ಲಿ ಮರಣ ಹೊಂದಿ, ಅವನೊಂದಿಗೆ ಹೂಣಲ್ಪಟ್ಟು ಮತ್ತು ಜೀವಿತವಾಗಿ ಎಬ್ಬಿಸಲ್ಪಟುತ್ತದೆ. (ರೋಮಾಪುರದವರಿಗೆ 6:3-4) ಸುನ್ನತಿ ಮಾಡಿಸುವುದರಿಂದ ಯಾವ ರೀತಿಯಲ್ಲಿಯೂ ನಮ್ಮ ಜೀವನದಲ್ಲಿ ಪವಿತ್ರಾತ್ಮನು ಆಹ್ವಾನ ಪಡೆಯುದಿಲ್ಲ, ಆದರೆ ದೀಕ್ಷಾಸ್ನಾನ ಮಾಡುವುದರಿಂದ ಪವಿತ್ರಾತ್ಮನನ್ನು ನಮ್ಮ ಜೀವನದಲ್ಲಿ ಆಹ್ವಾನ ಮಾಡಿಕೊಳ್ಳುತೇತ್ತೆವೆ (ಅಪೊಸ್ತಲರ ಕೃತ್ಯ 2:38)

ಇಬ್ರಿಯರಿಗೆ 8:11 ಒಂದೇ ಊರಿನವರೂ ಅಣ್ಣ ತಮ್ಮಂದಿರು ಒಬ್ಬರಿಗೊಬ್ಬರು ಕರ್ತನ ಜ್ಞಾನವನ್ನು ಪಡೆಯಿರಿ ಎಂದು ಬೋಧಿಸಬೇಕಾಗಿರುವುದಿಲ್ಲ, ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು. ಹಳೆಯ ಒಡಂಬಡಿಕೆಯಲ್ಲಿ ಜನರು ಒಡಂಬಡಿಕೆಯ ಮೇರೆಗೆ ಹುಟ್ಟಿ ಆಮೇಲೆ ದೇವರ ವಾಕ್ಯಗಳನ್ನು ಕಲಿಯುತ್ತಾರೆ. ಆದರೆ ಹೊಸ ಒಡಂಬಡಿಕೆಯಲ್ಲಿ ಮೊದಲು ದೇವರ ವಾಕ್ಯಗಳನ್ನು ಕಲಿಸಿ, ಆಮೇಲೆ ಹುಟ್ಟಿಸುತ್ತಾರೆ. (ಪುನಃ ಹುಟ್ಟುವುದು, ಹೊಸದಾಗಿ ಹುಟ್ಟುವುದು)

ಸುವಾರ್ತೆಯ ಪ್ರಕಾರ ಪ್ರಾಯದವರಿಗೆ ದೀಕ್ಷಾಸ್ನಾನ :

ಜನರು ವಿಶ್ವಾಸದಿಂದ ರಕ್ಷಣೆ ಹೊಂದಿರುವರು ಮತ್ತು ನಂತರ ದೀಕ್ಷಾಸ್ನಾನವನ್ನು ಪಡೆಯುವರು ದೀಕ್ಷಾಸ್ನಾನವು '' ಹೊರಗಿನ ನೋಟಕ್ಕೆ ಒಂದು ಚಿನ್ಹೆ ಆದರೆ ಒಳಗಿನ ನೋಟಕ್ಕೆ ಅನುಗ್ರಹ'' ಅಥವಾ ಹೊರಗಿನವರಿಗೆ ಯಾವ ರೀತಿಯಲ್ಲಿ ದೇವರಿಗೂ ಮತ್ತು ಮನುಷ್ಯನಿಗೂ ಸಂಭಂದ ಏರ್ಪಟ್ಟಿದೆ ಎಂದು ತೋರಿಸಲು.

1 ಪೇತ್ರನು 3:21.

# *ಪೆಂತಕೋಸ್ತ ತತ್ವ*

ಸೂಚನೆ : ನಾವು ನಿಜವಾಗಿರಯೂ ದೇವರು ನಮ್ಮ ಪ್ರಾರ್ಥನೆಗಳಿಗೆ ಉತ್ತರಿಸುತ್ತಾರೆ ಮತ್ತು ಅಧ್ಭುತಗಳನ್ನು ಸದಾ ಕಾಲಕ್ಲೂ ಮಾಡುತ್ತಾರೆಂದು ನಂಬುತ್ತೇವೆ.

ಆಯ್ಕೆಗೊಂಡ ಅಥವಾ ದೇವರಿಂದ ಸ್ವೀಕಾರ ಪಡೆದ ಕೆಲವು ವ್ಯಕ್ತಿಗಳಿಗೆ ಮಾತ್ರ ಅದ್ಬುತ ಮಾಡುವ ವರಗಳನ್ನು ಹೊಂದಿದ್ದಾರೆಂದು ಪೆಂತಕೋಸ್ತಲರು ಹೇಳಿಕೊಳ್ಳುತ್ತಾರೆ. ಉದಾ : ಅಪೂಸ್ತಲರೂ ತಲೆಯ ಮೇಲೆ ಕೈಯನ್ನಿಟ್ಟು ಅಧ್ಭುತ ತೋರಿಸುವ ಹಾಗೆ.

ಪರಿಶುದ್ಧ ಆತ್ಮನ ಅದ್ಬುತದ ವರಗಳು :

## ಈ ಕೊಡುಗೆಗಳನ್ನು ಕೊಡಲು ಉದ್ದೇಶ

ಇಬ್ರಿಯರಿಗೆ 2:1-4 ಉಪದೇಶಿಸಿದ ವಾಕ್ಯಗಳು ದೇವರಿಂದ ಬಂದಿದೆ ಎಂದು ಜನರು ಅರ್ಥಮಾಡಿಕೊಳ್ಳಲು ಪಲವಾರು ಅದ್ಬುತಗಳನ್ನು ಮಾಡಲಾಯಿತು. ನೆನಸಿಕೊಳ್ಳಿ, ಯೆರೋದ್ಯರಿಗೂ ಮತ್ತು ಅನ್ಯ ಜನರಿಗೂ ಇನ್ನೂ ಬರೆಯಲಾಗದದ ದೇವರ ವಾಕ್ಯಗಳನ್ನು ಉಪದೇಶಿಸಿ ಅವರನ್ನು ನಂಬಿಸುವುದು ಎಷ್ಟೋಂದು ಕಷ್ಟಕರವಾಗಿರಬಹುದೆಂದು.

## ಹೇಗೆ ವರಗಳು ದೊರಕಿದ್ದು ?

ಪವಿತ್ರಾತ್ಮ ವರಗಳನ್ನು ಅಪೋಸ್ತಲರು ಮಾತ್ರ ಬೇರೆಯವರ ಮೇಲೆ ಹರಿಸುವರು.

ಅವರು ಅದ್ಬುತ ಕಾರ್ಯಗಳನ್ನು ಮತ್ತು ಈ ಕೊಡುಗೆಗಳನ್ನು ಬೇರೆ ಶಿಷ್ಯರ ಮೇಲೆ ಹರಿಸಿದರು. ಏಕೆಂದರೆ ಅದು ಸಭೆಯನ್ನು ಬೆಳೆಸಲು ಸಹಾಯವಾಗಬೇಕೆಂದು.

ಅಪೊಸ್ತಲರ ಕೃತ್ಯಗಳು 2ನ್ನು ವಿರವಾಗಿ ಕಲಿಯೋಣ :

ಅಪೊಸ್ತಲರ ಕೃತ್ಯಗಳು 2ರಲ್ಲಿ 120 ವಿಶ್ವಾಸಿಗಳು ಅಲ್ಲಿ ನೆರೆದಿದ್ದರು, ಅಪೊಸ್ತಲರಿಗೆ ಮಾತ್ರವೇ ಭಾಷೆಗಳಿಂದ ಮಾತಾಡುವುದಕ್ಕೆ ಸಾಧ್ಯವಾಯಿತು. ಅದು ನಿಜವಾದ ಭಾಷೆಗಳು ಅಥವಾ ಸ್ಥಳೀಯ ಭಾಷೆ (ಗ್ರೀಕ್ ಭಾಷೆಯಲ್ಲಿ ಗೋಸಾ ಮತ್ತು ಡಾಯ್‌ಲೆಕ್ಟೋ)

ವಚನ 1ರಲ್ಲಿ '' ಅವರು ಹಿಂದೆ ಹೋದರೆ ಅದು ಹತ್ತಿರದ ಹಿಂದಿನ ಸಂಗತಿ '' ಅಪೊಸ್ತಲರು'' 1:26.

ವಚನ 7ರಲ್ಲಿ ಮಾತಾಡುತ್ತಿರುವ ಇವರೆಲ್ಲರು ''ಗಲಿಲಾಯದವರು'' ಎಲ್ಲ ಅಪೊಸ್ತಲರು ಗಲಿಲಾಯದವರು, ಈ ವಿಶೇಶತೆ ಯಾದಾಯ ಸೀಮೆಯ ಸ್ವಲ್ಪ ದೂರದಲ್ಲಿ ಇತ್ತು ಖಚಿತವಾಗಿಯೂ 120 ಜನರು ಗಲಿಲಾಯದಿಂದ ಅಲ್ಲ.

ವಚನ 14ರಲ್ಲಿ '' 11 ಮಂದಿ ಅಪೋಸ್ತಲರಲ್ಲಿ ಪೇತ್ರನು ಎದ್ದು ನಿಂತನು ಎಂದು ಹೇಳುತ್ತದೆ. ಅಲ್ಲಿ ನೆರೆದವರು ಎದ್ದು ಪೇತ್ರ ಮತ್ತು ಬೇರೆ ಅಪೊಸ್ತಲರಿಗೂ ಪ್ರಶ್ನೆಗಳನ್ನು ಕೇಳಿದರು.

ವಚನ 42ರಲ್ಲಿ ದೀಕ್ಷಾಸ್ನಾನದ ನಂತರ, ಶಿಷ್ಯರು ತಮ್ಮನ್ನು ಅಪೊಸ್ತಲರ ಬೋಧನೆಯನ್ನು ಕೇಳುವುದಕ್ಕೋಸ್ಕರ ಮುಡುಪಾಗಿಟ್ಟರು.

ವಚನ 43ರಲ್ಲಿ ಹೇಳುತ್ತದೆ ಅನೇಕ ಅದ್ಭುತ ಕಾರ್ಯಗಳೂ ಸೂಚಕ ಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು. ಅಪೊಸ್ತಲರ ಕೃತ್ಯಗಳು 2ರಲ್ಲಿ ಎಲ್ಲರಿಗೂ ಅರ್ಥವಾಗುವಂತಹ ಭಾಷೆಗಳಲ್ಲಿ ಮಾತಾನಾಡಿದರು. ಪ್ರದರ್ಶನ, ಸುಮ್ಮನೆ ಯಾವುದೋ ತರಹದ ಮಾತುಗಳೂ ಅಲ್ಲ ಭಾವೋದ್ರೇಕ ನುಡಿಗಳೂ ಅಲ್ಲ.

ವಚನ 6ರಲ್ಲಿ ಅಲ್ಲಿ ನೆರೆದ ಜನರು ತಮ್ಮ ತಮ್ಮ ಭಾಷೆಯಲ್ಲೇ ಮಾತಾಡುವುದನ್ನು ಕೇಳಿದರು.

ವಚನ 8ರಲ್ಲಿ '' ತಮ್ಮ ಸ್ವಂತ ಭಾಷೆ'' (ಸ್ಥಳೀಯ ಭಾಷೆ)

ವಚನ 11ರಲ್ಲಿ ಅಲ್ಲಿಯ ಜನರು ತಮ್ಮ ತಮ್ಮ ಭಾಷೆಗಳಲ್ಲಿ ದೇವರ ಮಹತ್ತುಗಳ ವಿಷಯವನ್ನು ಹೇಳುವುದನ್ನು ಕೇಳಿದರು.

ಅಪೊಸ್ತಲರ ಕೃತ್ಯಗಳು 2 ಮತ್ತು 6ರ ನಡುವೆ ಎಲ್ಲ ಅದ್ಭುತ ಕಾರ್ಯಗಳನ್ನು ಅಪೊಸ್ತಲರೇ ಮಾಡಿ ತೋರಿಸಿದ್ದು. ಅಪೊಸ್ತಲರ ಕೃತ್ಯಗಳು 6:1-6ರಲ್ಲಿ ವಿಧವೆಗಳಿಗೆ ಆಹಾರ ಕೊಡಲು ಸಹಾಯ ಮಾಡುವುದಕ್ಕೆ ವರಗಳನ್ನು ಕೊಟ್ಟರು. ಏಳು ಜನರನ್ನು ಆರಿಸಿದರು. ಆಮೇಲೆ ಅಪೊಸ್ತಲರು ಪ್ರಾರ್ಥನೆ ಮಾಡಿ ಅವರ ಮೇಲೆ ಕೈಗಳನ್ನಿಟ್ಟು ವಚನ 6ರಲ್ಲಿ ತಕ್ಷಣವೇ ಏಳು ಜನರಲ್ಲಿ ಒಬ್ಬನಾದ ಸ್ತೇಫನನು ಅದ್ಭುತ ಕಾರ್ಯಗಳನ್ನು ಸೂಚಕ ಕಾರ್ಯಗಳನ್ನು ಮಾಡಿದನು. (ವಚನ 8)

ಅಪೊಸ್ತಲರ ಕೃತ್ಯಗಳು 8 ಏಳು ಜನರಲ್ಲಿ ಒಬ್ಬನಾದ ಫಿಲಿಪ್ಪನು ಸಮಾರೇಯವೆಂಬ ಪಟ್ಟಣಕ್ಕೆ ಹೋಗಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ಮಂತ್ರ ತಂತ್ರಗಳನ್ನು ಮಾಡುತ್ತಿದ್ದ ಸೀಮೋನ ದೀಕ್ಷಾಸ್ನಾನ ಪಡೆದ, ಆದರೆ ಅಪೊಸ್ತಲರು ಅವರ ಮೇಲೆ ಕೈಗಳನ್ನಿಟ್ಟ ಮೇಲೆಯೇ ಅವರಿಗೆ ವರಗಳು ದೊರಕಿದ್ದು. ಪವಿತ್ರಾತ್ಮದಾನವಾಗುವುದನ್ನು ಸೀಮೋನನು ನೋಡಿ ಹಣವನ್ನು ತಂದು ಅವರ ಮುಂದಿಟ್ಟು ತಾನು ಯಾರ ಮೇಲೆ ಕೈಗಳನ್ನಿಡುತ್ತೇನೋ, ಅವರಿಗೆ ಪವಿತ್ರಾತ್ಮವರನನ್ನು ಹೊಂದುವಂತೆ ಅಧಿಕಾರವನ್ನು ಅವನಿಗೆ ಕೊಡಲು ಕೇಳಿದ. ಫಿಲಿಪ್ಪನಿಗೆ ಇರುವ ವರವನ್ನು ಬೇರೆಯಾರಿಗೂ ಕೊಡಲು ಸಾಧ್ಯವಿಲ್ಲ ಎಂದು ಇದರಿಂದ ತಿಳಿಯುತ್ತದೆ.

ಎಷ್ಟು ಕಾಲದವರೆಗೆ ವರಗಳು ಇರುತ್ತದೆ ?

ಈ ಅದ್ಭುತವಾದ ವರಗಳು ಅಪೋಸ್ತರ ಕೈಯಿಂದ ಬಂದಿರುವುದಾದರೆ ಅದು ಅಪೊಸ್ತಲರು ಯಾರ ಮೇಲೆ ಕೈಗಳನ್ನಿಟ್ಟಿದ್ದರೋ ಅವರು ಸತ್ತು ಹೋಗುತ್ತಿದಾಗಲೇ ಅದು ಮುಕ್ತಾಯಗೊಳ್ಳುತ್ತದೆ. ಉಪದೇಶಿಸಿದ ವಾಕ್ಯಗಳನ್ನು ದೃಢಮಾಡಿಕೊಳ್ಳುವುದಕೋಸ್ಕರ ಅದ್ಭುತ ಕಾರ್ಯಗಳನ್ನು ಮಾಡಲಾಗುತ್ತಿತ್ತು. ದೇವರ ವಾಕ್ಯಗಳನ್ನು ಬರೆಯಲ್ಪಟ್ಟಾಗ ಅದ್ಭುತ ಕಾರ್ಯಗಳ ಅವಶ್ಯಕತೆಯೇ ಬೇಕಾಗಿಲ್ಲ.

2 ತಿಮೋಥೆಯನಿಗೆ 3:16-17

ಈ ಗ್ರಂಥದಲ್ಲಿ ಶಿಷ್ಯರು ಪ್ರವೀಣವಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧರಾಗುವರು.

''ಗ್ರಂಥ''ದಲ್ಲಿ ಪೌಲನು ಬರೆದ ಪತ್ರವು ಅಡಕವಾಗಿದೆ.

ಹಿಂದಿನ ಕಾಲದಲ್ಲಿ ನಿಜವಾಗಿ ಮಾಡುತ್ತಿದ್ದ ಅದ್ಭುತ ಕಾರ್ಯಗಳು ಈಗಿನ ಕಾಲದಲ್ಲಿ ದೇವರ ವಾಕ್ಯದಲ್ಲಿ ಅದ್ಭುತ ಕಾರ್ಯಗಳು ಬರೆದಿರುವುದಕ್ಕೆ ಸಮಾನ.

ಯೋಹಾನ 20:30-31

ಯೇಸು 2ನ್ನು ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಮದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದುರುವುದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವನವನ್ನು ಪಡೆಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ.

ಯೋಹಾನ 20:27-29

ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ, ನೋಡದೆ ನಂಬಿದವರು ಧನ್ಯರು ಎಂದು ಹೇಳಿದರು.
ರೋಮಪುರದವರಿಗೆ 10:17, ಎಫೆಸ್ಸೆಯರಿಗೆ 3:3-5

ರೋಮಪುರದವರಿಗೆ 1:4 : ಯೇಸು ಸತ್ತ ಮೇಲೆ ಜೀವಿತವಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನ್ನು ಆಗಿದ್ದಾನೆ.

1ಕೋರಿಂಥದವರಿಗೆ 13:8-10

ಈ ವಾಕ್ಯದಲ್ಲಿ ಸರಳವಾಗಿ ಹೇಳುತ್ತದೆ ಅದು ಭಾಷೆ ಮತ್ತು ಜ್ಞಾನ ಎಲ್ಲವೂ ನಿಂತು ಹೋಗುತ್ತದೆ. ಅದೂ ಅಲ್ಲದೆ, ಅವರೆಲ್ಲರ ಪ್ರವಾದನೆಯು ಪರಿಪೂರ್ಣವಾಗಿರಲಿಲ್ಲ, ಯಾವಾಗಲಾದರೂ ಪ್ರವಾದಿಯೂ ಒಂದು ವಿಷಯದ ಬಗ್ಗೆ ಮಾತ್ರ ಪ್ರವಾದನೆ ಮಾಡುತ್ತಾರೆ. (1 ಕೋರಿಂಥದವರಿಗೆ 14:29-32) ಅವನು ಎಲ್ಲ ವಿಷಯ ಅಂಶಗಳನ್ನು ತಿಳಿಸಲಿಲ್ಲ. ಆದರೆ ಈದಿನ ನಾವು ಸಂಪೂರ್ಣ ದೇವರ ವಾಕ್ಯಗಳನ್ನು ಉಪಯೋಗಿಸಬಹುದು ಹಳೇಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ.

ವಚನ 10ರಲ್ಲಿ ಪರಿಪೂರ್ಣತೆಯು ಬಂದಾಗ ಅಪೂರ್ಣ ವರಗಳು ನಶಿಸಿ ಹೋಗುತ್ತವೆ ಎಂದು ಹೇಳುತ್ತದೆ. ಯಾವುದು ಸಂಪೂರ್ಣತೆ ? ಕ್ರೈಸ್ತ ಅಲ. ಗ್ರೀಕ್‌ನವರ ಕರಾರು ಲಿಂಗದಲ್ಲಿ ನಪುಂಸಕಲಿಂಗ. ಅವರಿಗೆ ಹೋಲಿಕೆ ಮಾಡುತ್ತಿದ್ದಲ್ಲಿ ಪುಲ್ಲಿಂಗವಾಗಿರುತ್ತದೆ. ಪ್ರೀತಿ ಅಲ್ಲ, ಏಕೆಂದರೆ ಪ್ರೀತಿ ಲಿಂಗದಲ್ಲಿ ಸ್ತ್ರೀಲಿಂಗವಾಗಿದೆ. ಅಪೂರ್ಣ ವರಗಳೆಲ್ಲಾ ದೇವವಾಣಿಯ ಕೊಡುಗೆಗಳು. ಮತ್ತೆ ಸಂಪೂರ್ಣತೆಯನ್ನು ದೇವವಾಣಿಯ ಜೊತೆಗೆ ಹೋಲಿಸಬಹುದು. ಪರಿಪೂರ್ಣತೆಯ ದೇವವಾಣಿಯು ಬರೆದಿರುವ ಪವಿತ್ರ ಗ್ರಂಥ ಅದ್ಭುತ ಕಾರ್ಯಗಳನ್ನು ಕೊನೆಗೊಳಿಸುತ್ತದೆ.

ನಿಯಮಗಳು :

ಅದಾಗ್ಯೂ ಈ ವರಗಳು ಸಭೆಗಳಲ್ಲಿ ಸಿಕ್ಕುತ್ತದೆ. ಇದನ್ನು ಉಪಯೋಗಿಸುವಾಗ ಕೆಲವು ನಿಯಮಗಳನ್ನು ಪಾಲಿಸಬೇಕೆಂದು ಪೌಲನು ಕೊರಿಂಥ ಸಭೆಗೆ ಪತ್ರ ಬರೆದನು. 1ಕೊರಿಂಥದವರಿಗೆ 14:5, 13,27,28.

ಒಬ್ಬೊಬ್ಬರಾಗಿ ಎರಡು ಅಥವಾ ಮೂರು ಪ್ರವಾದಿಗಳು ಮಾತ್ರ ಮಾತನಾಡಬೇಕು. ಈ ವರಗಳು ಈಗಲೂ ಇವೆ ಎಂದು ಹೇಳಿಕೊಳ್ಳುವ ಸಭೆಗಳಲ್ಲಿ ಈ ರೀತಿ ನಡೆಯುತ್ತಿದೆಯಾ ?

## ಕೊರ್ನೇಲ್ಯಸನ ಪರಿಸ್ಥಿತಿ :

ಅಪೊಸ್ತಲರ ಕೃತ್ಯಗಳು 10, 11 ಇಲ್ಲಿನ ಘಟನೆಗಳು ಕೊರ್ನೇಲ್ಯಸ್‌ನಿಗೂ ಮತ್ತು ಅವನ ಕುಟುಂಬಕ್ಕೆ ಸಂಬಂಧಿಸಿದೆ. ಇತಿಹಾಸದಲ್ಲಿ ಮತಾಂತರದ ಪ್ರಾರಂಭವನ್ನು ನೋಡುತ್ತೇವೆ. ಅನ್ಯ ಜನರು ಮತಂತರವಾಗುವುದನ್ನು ಅಪೊಸ್ತಲರನ್ನು ಸೇರಿಸಿ ಯಾರೂ ನಂಬಲಿಲ್ಲ. ದೇವರು ಈ ವಿಷಯವನ್ನು ಪೇತ್ರನಿಗೆ ತಿಳಿಸಲು ಕನಸಿನಲ್ಲಿ ತೋರಿಸಬೇಕಾಯಿತು. ಪವಿತ್ರಾತ್ಮ ವರವು ಅನ್ಯ ಜನರಿಗೆ ದೀಕ್ಷಾಸ್ನಾನದ ಮೊದಲೇ ಬಂದಾಗ ದೇವರು ಅನ್ಯ ಜನರನ್ನು ಒಪ್ಪಿದ್ದಾರೆಂದು ಅರ್ಥ ಮಾಡಿಕೊಂಡರು. ಅಪೊಸ್ತಲರ ಕೃತ್ಯಗಳು 11, ಪೇತ್ರನು ಯೆಹೂದ್ಯ ಕ್ರೈಸ್ತ ರ ಸಂಗಡ ಮತ್ತು ಯೆರೂಸಲೇಮಿನ ಅಪೊಸ್ತಲರ ಸಂಗಡಿಗರಿಗೆ ಅಲ್ಲಿ ಏನು ನಡೆಯಿತು ಎಂಬ ಸಂಗತಿಗಳನ್ನು ವಿವರಿಸಿ ಭಾಷಣ ಮಾಡಿದನು.

ಮೊದಲು ಅವನ ಕ್ರಿಯಗಳನ್ನು ಎಲ್ಲರೂ ನಿರಾಕರಿಸಿದರು. ನಂತರ ವಿಶ್ವಾಸಿಗಳಾದ ಅನ್ಯ ಜನರಿಗೆ ದೇವರು ಕೊಟ್ಟ ಪವಿತ್ರಾತ್ಮವರನ್ನು ನೋಡಿ ಒಪ್ಪಿಕೊಂಡರು. (ಅಪೊಸ್ತಲರ ಕೃತ್ಯಗಳು 11:18) ''ಅವರಿಗೆ ಮುಂದೆ ಯಾವ ರೀತಿಯ ಆಕ್ಷೇಪಣೆ ಮಾಡುವುದನ್ನು ಬಿಟ್ಟು ಹಾಗಾದರೆ ದೇವರು ಅನ್ಯ ಜನರಿಗೂ ಜೀವ ಕೊಡಬೇಕೆಂದು ಅವರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿದ್ದಾರೆ ಎಂದು ದೇವರನ್ನು ಕೊಂಡಾಡಿದರು.''

# ಜೆಹೋವಾಸ್ ವಿಟ್‌ನೆಸಸ್

19ನೇ ಶತಮಾನದಲ್ಲಿ ಚಾರ್ಲ್ಸ್ ರಸ್ಸಲ್ ಎಂಬುವರು ಪ್ರಾರಂಭಿಸಿದರು. ನ್ಯೂಯಾರ್ಕ್ ದೇಶದಲ್ಲಿ ಬ್ರೂಕ್ಲಿನ್ ಎಂಬ ಸ್ಥಳದಲ್ಲಿ ವಾಚ್‌ಟವರ್ ಮತ್ತು ಟ್ರ್ಯಾಕ್ಟ್ ಸೊಸೈಟಿಯ ಮೂಲಕ ಕೆಲಸವನ್ನು ನಡೆಸುತ್ತಿದ್ದಾರೆ.

ತಮ್ಮದೇ ಆದ ಅನುವಾದದ ಬೈಬಲನ್ನು ಅವರು ಉಪಯೋಗಿಸುತ್ತಿದ್ದಾರೆ. ರಕ್ತದ ವರ್ಗಾವಣೆ ಇರಕೂಡದು, ಬಾವುಟಕ್ಕೆ ತಲೆಬಾಗುವುದಿಲ್ಲ, ಮಿಲಿಟರಿಯಲ್ಲಿ ಕೆಲಸ ಮಾಡುವುದಿಲ್ಲ.

ಯೇಸುವು ರಕ್ಷಕನಾಗಿದ್ದರೂ ಪೂರ್ತಿಯಾಗಿ ದೇವರಿಲ್ಲ ಎಂಬುವುದು ಅವರ ಮುಖ್ಯವಾದ ತಪ್ಪಾದ ಸಂದೇಶ.

ದೇವರು ತಂದೆ, ಮಗ ಮತ್ತು ಪರಿಶುದ್ಧ ಆತ್ಮ ಎಂಬ ತ್ರಿಮೂರ್ತಿತ್ವವನ್ನು ಅವರು ಒಪ್ಪುವುದಿಲ್ಲ. ಪರಿಶುದ್ಧ ಆತ್ಮವು ವ್ಯಕ್ತಿಯಿಲ್ಲ ಅದು ದೇವರ ಒಂದು ಚುರುಕಾದ ಬಲ ಮತ್ತು ಯೇಸುವು ಮಾಡಲ್ಪಟ್ಟವರು ಆದುದರಿಂದ ದೇವರಿಗಿಂತ ಕಡಿಮೆಯಾದವರು, ಸ್ಪಷ್ಟವಾಗಿ ಹೇಳಬೇಕೆಂದರೆ ಪ್ರಧಾನ ದೇವದೂತನು ಆದರೆ ಖಂಡಿತವಾಗಿಯೂ ದೇವರಲ್ಲ.

ಪರಿಶುದ್ಧ ಆತ್ಮ

ಅನೇಕ ಬಾರಿ ನಾವು ಪರಿಶುದ್ಧ ಆತ್ಮದ ಬಗ್ಗೆ ಯೋಚಿಸುವಾಗ ಶಕ್ತಿಯನ್ನು ನೆನಸುತ್ತೇವೆ. ಹೌದು ಅವರು ಬಹಳ ಶಕ್ತಿಶಾಲಿಯಾದವರು ಆದರೆ ಅವರು ಬರೀ ಶಕ್ತಿ ಮಾತ್ರ ಆಗಿರದೆ ವ್ಯಕ್ತಿಯೂ ಸಹ ಆಗಿದ್ದಾರೆ. ವಿದ್ಯುಚ್ಛಕ್ತಿಗೆ ಶಕ್ತಿ ಇದೆ. ಆದೆ ಅದು ವ್ಯಕ್ತಿಯಲ್ಲ, ವಿದ್ಯುಚ್ಛಕ್ತಿಯ ಜೊತೆ ನಾವು ಮಾತನಾಡಲಿಕ್ಕಾಗಲಿ ಅಥವಾ ಸಂಬಂಧ ಬೆಳೆಸವುದಕ್ಕಾಗಲಿ ಸಾಧ್ಯವಿಲ್ಲ. ಆದರೆ ನಾವು ಪರಿಶುದ್ಧ ಆತ್ಮನ ಜೊತೆ ಸಂಬಂಧವನ್ನು ಬೆಳೆಸಬಹುದು.

ಪರಿಶುದ್ಧ ಆತ್ಮನನ್ನು ಅದು ಎಂದು ಕರೆಯದೆ ಅವರು ಎಂದು ಕರೆಯಬೇಕು.

ಪರಿಶುದ್ಧ ಆತ್ಮವು ಖಂಡಿತವಾಗಿಯೂ ದೇವರಿಂದ ಬಂದ ವರ.

ಅಪೋಸ್ತಲರು 2:38, 39. ಯಾವಾಗಲೂ ವರವು ವಸ್ತುವಾಗಿರುತ್ತದೆ. ಆದರೆ ಪರಿಶುದ್ಧ ಆತ್ಮನು ವಸ್ತುವಲ್ಲ.

ನಮಗೆ ತ್ರಿಮೂರ್ತಿತ್ವದ ಬಗ್ಗೆ ತಿಳಿದಿದೆ. ದೇವರು ಒಬ್ಬರೇ ಆದರೆ ಅವರು ಮೂರು ವ್ಯಕ್ತಿಗಳನ್ನು ಒಳಗೊಂಡಿದ್ದಾರೆ. ದೇವರು ತಂದೆಯಾಗಿದ್ದಾರೆ. ದೇವರು ಮಗನಾಗಿದ್ದಾರೆ, ದೇವರು ಪರಿಶುದ್ಧ ಆತ್ಮನಾಗಿದ್ದಾರೆ.

ಪರಿಶುದ್ಧ ಆತ್ಮನು ದೇವರ ಮೂರನೇಯ ವ್ಯಕ್ತಿಯಾಗಿದ್ದಾರೆ (ನಾವೆಲ್ಲವನ್ನೂ ಪ್ರಪಂಚದಲ್ಲಿರುವ ಇನ್ನೊಂದಕ್ಕೆ ಹೋಲಿಸುವುದರಿಂದ ಒಪ್ಪಿಕೊಳ್ಳಲು ಕಷ್ಟವಾಗುತ್ತದೆ. ತಂದೆ, ಮಗ ವ್ಯಕ್ತಿಗಳಾಗಿದ್ದಾರೆ. ಮೂರನೆಯವನು ಮೂರನೆಯ ಸ್ಥಾನ ಅಥವಾ ಶಕ್ತಿ ಎಂದು ನಾವು ಭಾವಿಸಬಾರದು.




ಯಾವುದೇ ಪ್ರಪಂಚದ ಉದಾಹರಣೆಯು ಇದನ್ನು ಸ್ಪಷ್ಟವಾಗಿ ವಿವರಿಸಲು ಸಾಧ್ಯವಿಲ್ಲ, ಏಕೆಂದರೆ ದೇವರು ಈ ಪ್ರಪಂಚಕ್ಕೆ ಒಳಗೊಂಡಿಲ್ಲ, ದೇವರ ಸ್ವಭಾವವು ಈ ಪ್ರಪಂಚದಲ್ಲಿ ಇರುವ ಎಲ್ಲದಕ್ಕಿಂತ ವ್ಯತ್ಯಾಸವಾಗಿದೆ.

ಮೊಟ್ಟೆಯ ಬಗ್ಗೆ ಯೋಚನೆ ಮಾಡಿ ನೋಡಿ, ಮೊಟ್ಟೆಯೊಳಗೆ ಏನೆಲ್ಲಾ ಇವೆ ? ಚಿಪ್ಪು, ಬಿಳಿಬಣ್ಣದ್ದು, ಹರಿಶಿಣ ಬಣ್ಣದ್ದು, ನಾವು ಅಂಗಡಿ ಹೋಗಿ ಕೊಂಡುಕೊಳ್ಳುವಾಗ ಚಿಪ್ಪು, ಬಿಳಿಬಣ್ಣದ್ದು, ಮತ್ತು ಹರಿಶಿಣ ಬಣ್ಣದ್ದನ್ನು ಕೊಡಿ ಎಂದು ಕೇಳುತ್ತೇವಾ ? ಇಲ್ಲ ಬದಲಾಗಿ ದಯವಿಟ್ಟು ಒಂದು ಕೋಳಿ ಮೊಟ್ಟೆಯನ್ನು ಕೊಡಿ ಎಂದು ಕೇಳುತ್ತೇವೆ.

ಅದೇ ತರಹ ನಾವು ದೇವರು ಎಂದು ಕರೆದಾಗ ತಂದೆ, ಮಗ ಮತ್ತು ಪವಿತ್ರಾತ್ಮವನ್ನು ಒಳಗೊಂಡಿದೆ ಎಂದು ಅರ್ಥ ಮಾಡಿಕೊಳ್ಳಬೇಕು.

ನಾವು ಮೊಟ್ಟೆಯ ಹಳದಿ ಬಣ್ಣದ್ದನ್ನು ತಿನ್ನುತ್ತಿರುವಾಗ ಯಾರಾದರೂ ಬಂದು ನೀನು ಏನನ್ನು ತಿನ್ನುತ್ತಿದ್ದೀಯಾ ಎಂದು ಕೇಳಿದಾಗ ನೀವು ಏನು ಉತ್ತರ ಕೊಡುವಿರಿ ? ನಾನು ಮೊಟ್ಟೆಯ ಹಳದಿ ಬಣ್ಣದ್ದನ್ನು ತಿನ್ನುತ್ತಿದ್ದೇನೆ ಎಂದು ಉತ್ತರಿಸುತೇವಾ ? ಅಥವಾ ಮೊಟ್ಟೆಯನ್ನು ತಿನ್ನುತ್ತಿದ್ದೇನೆ ಎಂದು ಉತ್ತರಿಸುತೇವಾ ?

ಅದೇ ತರಹ ತಂದೆಯು ದೇವರು, ಮಗನು ದೇವರು ಮತ್ತು ಪವಿತ್ರಾತ್ಮನು ದೇವರು.

ನಾವು ಹೇಗೆ ತಂದೆಯಾದ ದೇವರಲ್ಲಿ ಮಾತನಾಡುತೇವೆಯೋ ಅದೇ ರೀತಿಯಾಗಿ ಮಗನಾದ ದೇವರಲ್ಲಿ ಮತ್ತು ಪವಿತ್ರಾತ್ಮನಾದ ದೇವರಲ್ಲಿಯೂ ಸಹ ಮಾತನಾಡಬಹುದು.

ಮತ್ತಾಯ 12:31-32 ಪರಿಶುದ್ಧ ಆತ್ಮನ ವಿರುದ್ಧ ದೇವದೂಷಣೆ ಮಾಡುವುದು.
ಯೋಹಾನ 14:26 ಅವರು ಉಪದೇಶಿಸಲು ಸಾಮರ್ಥ್ಯರು (ಯಾರು)
ಅಪೋಸ್ತಲರು 5:3 ಅವರಿಗೆ ಸುಳ್ಳು ಹೇಳುವುದು
ಅಪೋಸ್ತಲರು 7:51 ಅವರನ್ನು ತಡೆಯುವುದು
ಅಪೋಸ್ತಲರು 13:2 ಇವ್ಯಾಂಜಲಿಸಮ್‌ಗೆ ಮಾತನಾಡುವುದರ ಮೂಲಕ ಮಾರ್ಗದರ್ಶನ ಮಾಡಿದರು.
ರೋಮಾಪುರ 8:14 ದೇವರ ಮಕ್ಕಳನ್ನು ನಡೆಸುವುದಾಗಿ ವಾಗ್ದಾನ ಮಾಡುತ್ತಾರೆ.
2ಕೊರಿಂಥದವರು 13:14 ನಮ್ಮ ಜೊತೆಗಾರ
ಎಫೆಸ್ಸಯದವರಿಗೆ 4:30 ಅವರಿಗೆ ದುಃಖ ಉಂಟು ಮಾಡುವುದು.
1 ತಿಮೋತಿ 4:1 " ಆತ್ಮನು ಸ್ಪಷ್ಟವಾಗಿ ಹೇಳುತ್ತಾನೆ " ಅವನು ಹೇಳುವನು
ಇಬ್ರಿಯರಿಗೆ 10:15 ಅವರು ಸಾಕ್ಷಿ ಹೇಳುವರು.
ಆದುದರಿಂದ ಆತ್ಮನು ವಸ್ತುವಲ್ಲ, ಅವನು ವ್ಯಕ್ತಿಯಾಗಿದ್ದಾನೆ.

## ಕಡ್ಡಾಯವಲ್ಲ

ಈಗ ನಾವು ಇದೊಂದು ಅರ್ಥಮಾಡಿಕೊಂಡಿದ್ದೇವೆ. ಈಗ ನಾವು ಪವಿತ್ರಾತ್ಮನ ಗುಣಗಳು ಅಥವಾ ಅವರ ಪಾತ್ರವನ್ನು ನೋಡೋಣ. ಹಳೆಯ ಒಡಂಬಡಿಕೆಯ ಸಮಯದಲ್ಲಿ ಆಯ್ಕೆಗೊಂಡ ಕೆಲವು ಪ್ರವಾದಿಗಳಿಗೆ ಮಾತ್ರ ಪವಿತ್ರಾತ್ಮವನ್ನು ನೀಡಲಾಗಿತ್ತು. ಪವಿತ್ರಾತ್ಮನು ಸಂದೇಶ ಅಥವಾ ಭವಿಷ್ಯವಾಣಿಯನ್ನು ಅವರಿಗೆ ಕೊಟ್ಟನು. ಅವರು ಅದನ್ನು ದೇವರ ಬದಲಾಗಿ ಜನರಿಗೆ ತಲುಪಿಸುತ್ತಿದ್ದರು. ಆದರೆ ಯೇಸುವು ತಾನು ಪ್ರಪಂಚವನ್ನು ಬಿಟ್ಟು ಹೋದಾಗ ಪವಿತ್ರಾತ್ಮನನ್ನು ಎಲ್ಲರಿಗಾಗಿಯೂ ಕಳಿಸುವೆನು ಎಂದು ವಾಗ್ದಾನ ಮಾಡಿದರು.

1. ಅವರು ಸಲಹೆಗಾರರಾಗಿದ್ದಾರೆ.

ಯೋಹಾನ 14 :16,17 ತಾನು ಬಿಟ್ಟು ಹೋದಾಗ ಪವಿತ್ರಾತ್ಮನನ್ನು ಕಳುಹಿಸಬೇಕೆಂದು ತಂದೆಯಲ್ಲಿ ಕೇಳಿಕೊಳ್ಳುವುದಾಗಿ ಯೇಸುವು ವಾಗ್ದಾನ ಮಾಡಿದರು. ಪವಿತ್ರಾತ್ಮನನ್ನು ಸಲಹೆಗಾರ ಎಂದು ವರ್ಣಿಸಿದದ್ದಾರೆ.

ನಮಗೆ ಯಾವಾಗಲೂ ಸಲಹೆಗಾರರಾಗಿ ಯಾರಿರಲು ಸಾಧ್ಯ ? ಪರಿಶುದ್ಧ ಆತ್ಮ, ಅವರು ಯಾವಾಗಲೂ ನಮ್ಮೊಂದಿಗಿದ್ದಾರೆ.

2. ಅವರು ಉಪದೇಶಕರಾಗಿದ್ದಾರೆ.

ಯೋಹಾನ 14 : 25,26 ಪವಿತ್ರಾತ್ಮನು ಸಲಹೆಗಾರನು ಮಾತ್ರ ಆಗಿಂದೆ ಯೇಸುವಿನ ವಾಕ್ಯಗಳನ್ನು ಉಪದೇಶಿಸುತ್ತಾರೆ ಮತ್ತು ಜ್ಞಾಪಕಮಾಡುತ್ತಾರೆ ಎಂದು ಯೇಸುವು ಹೇಳುತ್ತಾರೆ.

ಶೋಧನೆಗಳಿಂದ ಹೊರಬಂದು ಸರಿಯಾದ ಕಾರ್ಯವನ್ನು ಮಾಡಲು ಯೇಸುವಿನ ವಾಕ್ಯಗಳನ್ನು ಜ್ಞಾಪಿಸಿಕೊಳ್ಳಬೇಕಾಗಿದೆ.

3. ನಮ್ಮ ಪಾಪಗಳು ಮನವರಿಕೆಯಾಗುವಂತೆ ಮಾಡುತ್ತಾರೆ.

ಯೋಹಾನ 16:5:11 ನಮ್ಮ ಪಾಪಗಳ ಮನವರಿಕೆ, ನೀತಿವಂತಿಕೆ ಮತ್ತು ತೀರ್ಪನ್ನು ಪರಿಶುದ್ಧ ಆತ್ಮನು ಮಾಡುತ್ತಾನೆ.

4. ಪ್ರಾರ್ಥನೆ ಮಾಡಲು ಸಹಾಯ ಮಾಡುತ್ತಾರೆ.

ರೋಮಾಪುರ 8:26,27

## ಯೇಸುವಿನ ಸ್ವಭಾವ :

ಯಶಾಯ 9:6-7 ಯೆಶಾಯನು ಯೇಸುವಿನ ಬಗ್ಗೆ ಹೀಗೆ ಪ್ರವಾದನೆ ಮಾಡುತ್ತಾನೆ. '' ಶಕ್ತಿಶಾಲಿಯಾದ ದೇವರು, ಎಂದೆಂದಿಗೂ ಇರುವ ದೇವರು ಮತ್ತು ಸಮಾದಾನದ ಪ್ರಭು''.

ಮೀಕನು 5:2 ಬೆತ್ಲೆಹೇಮಿನಿಂದ ಅಧಿಕಾರಿಯು ಬರುವನು.

ಯರೇಮಿಯ 23:5-6 ದಾವೀದನ ವಂಶಾವಳಿಯಿಂದ ಬಂದ ನೀತಿವಂತಿಕೆಯ ರೆಂಬೆ ವಿಶಿಷ್ಟವಾಗಿ '' ನೀತಿವಂತಿಕೆಯ ರಾಜ'' ಎಂದು ಕರೆಯಲ್ಪಟ್ಟಿದ್ದಾರೆ.

| | |
|---|---|
| ಯಶಾಯ 45 : 18-23 ರಲ್ಲಿ ''ಎಲ್ಲರೂ ನನಗೆ ಅಡ್ಡ ಬೀಳುವರು, ಎಲ್ಲರೂ ನನ್ನನ್ನು ದೇವರೆಂದು ಪ್ರತಿಜ್ಞೆ ಮಡುವರು ಎಂಬ ನುಡಿ ನನ್ನ ಸತ್ಯದ ಬಾಯಿಂದ ಹೊರಟಿದೆ. ''<br>ಯಾಕೆಂದರೆ ಇವರೊಬ್ಬರು ಮಾತ್ರ ದೇವರಾಗಿದ್ದಾರೆ. | ಈಗ ಫಿಲಪ್ಪಿಯರಿಗೆ 2:10-11 '' ಆದುದರಿಂದ ಸ್ವರ್ಗ, ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡ ಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು.'' ಯೇಸುವು ದೇವರಲ್ಲವೆಂದರೆ ಎಲ್ಲರೂ ಅಡ್ಡಬಿದ್ದು ಆರಾಧಿಸುವುದು ಹೇಗೆ ಸಾಧ್ಯವಾದೀತು ? |
| ಯೋವೇಲನು 2:32 '' ಅದರೂ ಯೋಹೋವನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆ ಯಾಗುವುದು.'' | ರೋಮಾಪುರ10:9-11 ಯೇಸುವಿನ ನಾಮವನ್ನು ಹೇಳಿಕೊಳ್ಳುವುದು ಮತ್ತು ರಕ್ಷಣೆಯಾಗುವುದು ಯಹೋವನ ನಾಮಕ್ಕೆ ಸಮ ಎಂದು ಹೇಳುತ್ತದೆ. |
| ಯೆಶಾಯ40:3-5 ಯೊಹಾನ ದೀಕ್ಷಸ್ನಾನಿಯು ಯೇಸುವಿನ ದಾರಿಯನ್ನು ತಯಾರಿಮಾಡುವುದರ ಬಗ್ಗೆ ಮಾತನಾಡುತ್ತದೆ. | ಮತ್ತಾಯ 3:1-12 ಯೋಹಾನನ ಮಿನಿಸ್ಟ್ರಿ. |
| ಯೆಶಾಯ 42:5 ಯೆಹೋವನು ಎಲ್ಲವನ್ನೂ ಸೃಷ್ಟಿಸಿದ್ದಾನೆ. | ಯೋಹಾನ1:1-3 ಮತ್ತು ಕೊಲೆಸ್ಸೆಯರು 1:15-16 ಇದರಲ್ಲಿ ಯೇಸುವಿನ ಬಗ್ಗೆ ಇದನ್ನೇ ಹೇಳುತ್ತದೆ. |
| ಯೆಶಾಯ 45:5 '' ನಾನೇ ಯೆಹೋವ, ಇನ್ನು ಯಾವನೂ ಅಲ್ಲ ನಾನು ಹೊರತು ಯಾವ ದೇವರೂ ಇಲ್ಲ''. | ತೀತನು 2:13 ''ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ.....''<br>1ಪೇತ್ರ, 1:1 ಯೇಸು ಕ್ರಿಸ್ತ ದೇವರು ಮತ್ತು ರಕ್ಷಕ<br>**2ಯೋಹಾನ 5:20.** |

| | |
|---|---|
| ವಿಮೋಚನಾಕಾಂಡ 3:14''ನಾನು ನಾನೇ'' (ಯಹೋವ). | ಯೋಹಾನನು 8:58 ಅಬ್ರಹಾನನು ಹುಟ್ಟುವುದಕ್ಕೆ ಮುಂಚೆಯೇ ನಾನು ಇದ್ದೇನೆ. |
| ಧರ್ಮೋಪದೇಶಕಾಂಡ 33:27 ದೇವರು ಎಂದೆಂದಿಗೂ ಇರುವವರಾಗಿದ್ದಾರೆ. | ಪ್ರಕಟಣೆಗಳು 1:8, 22:13-16 ಯೇಸು ''ನಾನೇ ಆರಂಭವೂ ಮತ್ತು ಅಂತ್ಯವು..'' |
| ಯಹೋದ್ಯರ ಆಪಾಧನೆ : | ಯೋಹಾನ 5:18 ''ದೇವರಿಗೆ ಸರಿಸಮಾನರು'' ಯೋಹಾನ 10:33 ''ದೇವರೆಂದು ಹೇಳಿಕೊಳ್ಳುತ್ತಾರೆ''. |
| ಯೇಸುವಿನಿಂದಲೇ ಆರಾಧಿಸ್ಪಟ್ಟವರಾಗಿದ್ದಾರೆ. ಮತ್ತಾಯಿ 4:10 '' ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು'' ಎಂದು ಯೇಸುವೇ ಹೇಳಿದ್ದಾರೆ. | ಮತ್ತಾಯ 8:2 ಕುಷ್ಠರೋಗಿಯು ಯೇಸುವನ್ನು ಆರಾಧಿಸಿದನು.<br>ಮತ್ಥಾಯನು 9:18 ಅಧಿಕಾರಿಯು ಅಡ್ಡಬಿದ್ದು ಆರಾಧಿಸಿದನು.<br>ಮತ್ತಾಯನು 14:33 ಅಪೋಸ್ತಲರು ಆರಾಧಿಸಿದರು.<br>ಮತ್ತಾಯಾನು 15:25 ಕಾನನ್ಯ ಮಹಿಳೆ.<br>ಇಬ್ರಿಯರಿಗೆ1:6 ದೇವದೂತಲು ಯೇಸುವನ್ನು ಆರಾಧಿಸಿದರು. |

ಮನುಷ್ಯನ ಸ್ವಭಾವ

ಒಬ್ಬ ವ್ಯಕ್ತಿಯು ಮರಣ ಹೊಂದಿದ ನಂತರ ಅವನು ಜೀವಂತವಾಗಿದ್ದೇನೆ ಎಂಬುದು ಅವನಿಗೆ ಜ್ಞಾಪಕವಿರುವುದಿಲ್ಲ ಎಂದು ಯೆಹೋವ ವಿಟ್‌ನೆಸಸ್‌ರವರು ಉಪದೇಶಿಸುತ್ತಾರೆ. ಮನುಷ್ಯನಿಗೆ ಆತ್ಮವಿದೆ ಎಂದು ಬೈಬಲ್ ಸ್ಪಷ್ಟವಾಗಿ ಹೇಳಿದೆ.

ಮತ್ತಾಯ10:28 ಯೇಸುವು ಮನುಷ್ಯನ ದೇಹ ಮತ್ತು ಆತ್ಮದ ಬಗ್ಗೆ ಮಾತನಾಡುತ್ತಾರೆ. ಪ್ರಕಟಣೆ 6:9-10. ಲೂಕ 23:46 ''ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ'' ಎಂದು ಯೇಸುವು ಶಿಲುಬೆಯ ಮೇಲೆ ಇರುವಾಗ ಹೇಳಿದರು.

ಮತ್ತಾಯ22:23-32 ಅಬ್ರಹಾಮ್, ಇಸಾಕ ಮತ್ತು ಯಾಕೋಬರ ದೇಹ ನಾಶಗೊಂಡಿದ್ದರೂ ಸಹ ಅವರು ಈಗಲೂ ಜೀವಂತವಾಗಿ ಇದ್ದಾರೆ.

# ಸಬತ್ತನ್ನು ಕಡೆಯಡಯುವವರು

ಸೆವೆನ್ತ್ ಡೆ ಅಡ್‌ವೆನ್‌ಟಿಸ್ಟ್ : ಇದನ್ನು ಬ್ಯಾಪ್‌ಟಿಸ್ಟ್ ಪ್ರಚಾರಕರಾದ ವಿಲಿಯಮ್ ಮಿಲ್ಲರ್ ಎಂಬುವರು ಪ್ರಾರಂಭಿಸಿದರು. ಪ್ರವಾದನೆಯನ್ನು ಆಳವಾಗಿ ಅಧ್ಯಯನ ಮಾಡಿ ಯೇಸು ಕ್ರಿಸ್ತನು ಕಿ.ಶ. 1843 ರಲ್ಲಿ ಹಿಂತಿರುಗುವರು ಎಂದು ನಿರ್ಣಯಿಸಿದನು. ಆ ವರ್ಷ ಬಂದು ಹೋದಾಗ ಇನ್ನೊಮ್ಮೆ ಸರಿಯಾಗಿ ಲೆಕ್ಕ ಮಾಡಿ 1844 ಎಂದು ಹೇಳಿದನು. ಬಹಳ ಜನರು ಅದನ್ನು ಒಪ್ಪಿ ನಂಬಿದರು. ಎಲ್ಲರನ್ನೂ ಒಟ್ಟುಗೂಡಿಸಿ ಅದರ ನಾಯಕನಾದವಳೇ ಎಲ್ಲೆನ್ ಜಿ. ವೈಟ್. ಇವಳು 7ನೇ ದಿನ ಎಂಬುದನ್ನು ಸೇರಿಸಿಕೊಂಡಳು. ಅವಳಿಗೆ ಒಮ್ಮೆ ದೇವರು ಕನಸಿನಲ್ಲಿ ಕಾಣಿಸಿಕೊಂಡು 10 ಕಟ್ಟಳೆಗಳಲ್ಲಿ 4ನೇ ಕಟ್ಟಳೆಗೆ ಮಹತ್ವವನ್ನು ಕೊಡಬೇಕೆಂದು ಹೇಳಿದರಂತೆ. ಈ ಕನಸು 1847ರಲ್ಲಿ ಉಂಟಾಯಿತು. 1860ರಲ್ಲಿ ಸೆವೆನ್ತ್‌ಡೆ ಅಡ್‌ವೆನ್‌ಟಿಸ್ಟ್ ನ್ನು ಜಾರಿಗೆ ತರಲಾಯಿತು. ಮೊದಲನೆಯ ಸಮಾವೇಶವನ್ನು 1863ರಲ್ಲಿ ನಡೆಸಲಾಯಿತು.

ಇನ್ನೊಂದು ಗುಂಪು ಸಬತ್ತನ್ನು ಕಡೆಯಿಡಿಯುವವರು. ವರ್ಲ್ಡ್‌ವೈಡ್ ಚರ್ಚ್ ಆಫ್ ಗಾಡ್. ಅಡ್‌ವೆನ್‌ಟಿಸ್ಟ್‌ನವರು ಸಂಪ್ರಾದಾಯದ ಕಾಯಿದೆ ಮತ್ತು ನೀತಿಯ ಕಾಯಿದೆ (10 ಕಟ್ಟಳೆಗಳು) ಎಂದು ವಿಂಗಡಗೆ ಮಾಡುತ್ತಾರೆ.

ಮೊದಲನೆಯದನ್ನು ಮೋಸಸನ ಕಾಯಿದೆ ಎಂದೂ ಮತ್ತು ನಂತರದ್ದನ್ನು ದೇವರ ಕಾಯಿದೆ ಎನ್ನಲಾಗಿದೆ. ಈ ವ್ಯತ್ಯಾಸಗಳಿಂದ ಇವತ್ತಿಗೂ ಸಬತ್ ಕಾಯಿದೆಯನ್ನು ಕಡೆಹಿಡಿಯಬೇಕು ಎಂತೇನಿಲ್ಲ. ನೀತಿಯ ಕಾಯಿದೆಗಳು ಬಹಳಷ್ಟುಮಟ್ಟಿಗೆ ಸ್ವಯಂಸಾಕ್ಷಿಯಾಗಿದೆ. ಬರೆದ ಕಾಯಿದೆಗಳು ಇಲ್ಲದಿರುವ ಸಮಯದಲ್ಲೂ ಪ್ರಪಂಚದ ಮೊಟ್ಟ ಮೊದಲನೆ ಕೊಲೆ ಮಾಡಿದ ಕಾಯನಿಗೆ ತಾನು ಮಾಡುತ್ತಿರುವುದು ತಪ್ಪು ಎಂದು ತಿಳಿದಿತ್ತು (ಆದಿಕಾಂಡ 4:9), ಬೇರೆ ಕಾಯಿದೆಗಳು ದೇವರ ಧ್ವನಿಯಿಂದ ಪ್ರಕಟಣೆಯಾಗಿ ಹೊರಟಿದೆ ಮತ್ತು ಸ್ವಯಂ ಸಾಕ್ಷಿಯಾಗಿಲ್ಲ. ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ ಕೆಲವು ವಿಷಯಗಳು ಬೈಬಲಿನಲ್ಲಿ ಇದೆ ಕಾರಣ ಅದು ಸತ್ಯವಾಗಿದೆ. (ನೀತಿಯ ಕಾಯಿದೆಗಳು). ಬೇರೆ ವಿಷಯಗಳು ಬೈಬಲಿನಲ್ಲಿ ಸುಮ್ಮನೆ ಇರುವುದರಿಂದ ಅದು ನಿಜವಾಗಿದೆ. ದೇವರ ಪ್ರಕಟಣೆಯಿಂದ ಬರೆಯಿಲ್ಪಟ್ಟಿದೆಯೋ ಇಲ್ಲವೋ ನೀತಿಯ ಕಾಯಿದೆಗಳು ಮೊದಲಿನಿಂದಲೂ ಸತ್ಯವಾಗಿದೆ. 10 ಕಟ್ಟಳೆಗಳಲ್ಲಿ ಒಂದಾದ ಸಬತ್ ಕಾಯಿದೆಯು ಇನ್ನಿತರ 9 ಕಾಯಿದೆಗಳ ತರಹ ಎಲ್ಲ ಸಮಯದಲ್ಲಿಯೂ ನಿಜವಾದ ತತ್ವಗಳಾಗಿರಲಾರದು. ಸಬತ್ ಕಾಯಿದೆಯ ಹಿಂದೆ ಕೆಲವು ತತ್ವಗಳಿವೆ. ಯಾವಾಗಲೂ ಕೆಲಸವನ್ನು ಮಾಡದೆ ಪ್ರತಿವಾರದಲ್ಲಿ ಒಂದು ದಿನವನ್ನು ವಿಶೇಷವಾಗಿ ದೇವರಿಗೆ ಗೌರವಿಸಲು ಉಪಯೋಗಿಸಬೇಕು. ಆದರೆ ಈ ತತ್ವವನ್ನು ನಿರ್ದಿಷ್ಟವಾಗಿ ಈ ದಿನವೇ ಮಾಡಬೇಕೆಂದು ರೂಪಿಸಿಲ್ಲ. ನಿರ್ದಿಷ್ಟವಾದ ದಿನವು ದೇವರಿಂದ ಪ್ರಕಟಣೆಗೊಳ್ಳಬೇಕಾಗಿದೆ. ಹಳೆಯ ಒಡಂಬಡಿಕೆಯು ದಿನವು 7ನೇ ದಿನವಾಗಿದೆ. ಹೊಸ ಒಡಂಬಡಿಕೆಯ ದಿನವು ಮೊದಲನೇಯ ದಿನವಾಗಿದೆ.

ಹಳೆಯ ಒಡಂಬಡಿಕೆಯ ನೀತಿ ಕಟ್ಟಳೆಗಳು ಹೊಸ ಒಡಂಬಡಿಕೆಯಲ್ಲಿ ಹೊಸದಾಗಿ ಹೇಳಲ್ಪಟ್ಟಿದೆ. (ಮತ್ತಾಯ 5)

ಈ ಒಡಂಬಡಿಕೆಗಳ ನಡುವೆ ಇರುವ ಸಂಬಂಧವನ್ನು ಈ ರೂಪಕದಲ್ಲಿ ಅರ್ಥಮಾಡಿಕೊಳ್ಳಬಹುದು. ಗಲಾತ್ಯದವರಿಗೆ 4:21-31.

ಹಾಗರಳು (ಹಳೆಯ ಒಡಂಬಡಿಕೆ (ತೆಗೆದು ಹಾಕಲಾಗಿದೆ).

ಇಸ್ಮಾಯಿಲ್ (ಸಾಧಾರಣವಾಗಿ ಜನಿಸಿದವನು)

ಸಾರಾರಳು ( ಹೊಸ ಒಡಂಬಡಿಕೆ (ಸ್ವತಂತ್ರ ಮಹಿಳೆ)

ಇಸಾಕನು (ವಾಗ್ದಾನದಿಂದ ಹುಟ್ಟಿದವನು. )

ಹಾಗರಳೂ ( ಸಿನಾಯ ಬೆಟ್ಟ (ಕಾಯಿದೆ 10 ಕಟ್ಟಳೆಗಳನ್ನು ಒಳಗೊಂಡಿದೆ)

ಗಲಾತ್ಯದವರಿಗೆ 3:26-4:23

ಕಾಯಿದೆಯು ಒಳ್ಳೆಯದು ಉಪಯೋಗವಾಗಿದ್ದಿತು. ಯೇಸು ಬರುವವರೆಗೂ.

ದೀಕ್ಷಸ್ನಾನ ಹೊಂದಿದ ಶಿಷ್ಯರೆಲ್ಲರೂ ಯೇಸು ಕ್ರಿಸ್ತುವಿನ ಮೇಲೆ ನಂಬಿಕೆಯಿಂದಾಗಿ ದೇವರ ಮಕ್ಕಳಾಗಿದ್ದಾರೆ. ವಂಶಿಕನು ಇನ್ನೂ ಮಗುವಾಗಿರುವಾಗ ಅವನು ದಾಸನಾಗಿಯೇ ಇರುತ್ತಾನೆ. (4:2) ತಂದೆಯು ನೇಮಿಸಿದ ದಿನದವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವನು. ಯೆಹೂದ್ಯರು (ಯಾರಾದರೂ ದೇವರ ಮೇಲೆ ನಂಬಿಕೆಯನ್ನಿಟ್ಟವರು) ಪಾಲಕರ ಅಧೀನದಲ್ಲಿ ಇದ್ದವರು. (ಕಾಯಿದೆ) (ದಾಸತನ). ಆದರೆ ಈಗ ನಾವು ಯೇಸುವಿನಲ್ಲಿರುವುದರಿಂದ ನಾವು ಕಾಯಿದೆಯ ಅಧೀನದಲ್ಲಿ ಇಲ್ಲ. ನಾವು ಸ್ವತಂತ್ರರಾಗಿದ್ದೇವೆ.

ವ.4-5 ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು.

ವ.9 ಹೀಗಿರುವಾಗ ನೀವು ಕೆಲಸಕ್ಕೆ ಬಾರದ ದರಿದ್ರ ಬಾಲಬೋಧೆಗೆ ಮತ್ತು ಅಧೀನರಾಗಬೇಕೆಂದು ಅಪೇಕ್ಷಿಸಿ ಪುನಃ ಅದಕ್ಕೆ ತಿರುಗಿಕೊಳ್ಳುವುದು ಹೇಗೆ ? ನೀವು ಆಯಾ ದಿನಗಳನ್ನೂ ಮಾಸಗಳನ್ನೂ ಉತ್ಸವಕಾಲಗಳನ್ನೂ ಸಂವತ್ಸರಗಳನ್ನೂ ನಿಷ್ಠೆಯಿಂದ ಆಚರಿಸುತ್ತೀರಿ.

ಗಲಾತ್ಯದವರಿಗೆ 5:4 ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು. ಕೃಪಾಶ್ರಯದೊಳಗಿಂದ ಬಿದ್ದು ಹೋದರು.

ರೋಮಾಪುರ 7:1-6 ಮದುವೆಯ ಬಗ್ಗೆ ವಿವರಣೆ. ಗಂಡನು ಜೀವದಿಂದಿರುವ ತನಕ ಹೆಂಡತಿಯು ನ್ಯಾಯದ ಪ್ರಕಾರ ಅವನಿಗೆ ಬದ್ಧಳಾಗಿರುವಳು. ಗಂಡನು ಸತ್ತರೆ ಗಂಡನ ಹಂಗು ಆಕೆಗೆ ತಪ್ಪುವುದು. ವ.4 ``ಹಾಗೆಯೇ ನನ್ನ ಸಹೋದರರೇ, ನೀವು ಸಹ ಕ್ರಿಸ್ತನ ದೇಹದ ಮೂಲಕವಾಗಿ ಧರ್ಮಶಾಸ್ತ್ರದ ಪಾಲಿಗೆ ಸತ್ತಿರಿ. ದೇವರಿಗೆ ಫಲವಾಗುವುದಕ್ಕಾಗಿ ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತವಾಗಿ ಎದ್ದಾತನನ್ನು ಸೇರಿಕೊಂಡಿರಿ.'' ಈ ನ್ಯಾಯವು ಯಾವುದರ ಬಗ್ಗೆ ಮಾತನಾಡುತ್ತಿದೆ ? 10 ಕಟ್ಟಳೆಯನ್ನು ಬಿಟ್ಟು ಎಲ್ಲವೂ ನ್ಯಾಯವಲ್ಲವಾ ? ಅದನ್ನು

# ಯೇಸುವಿನ ಬಗ್ಗೆ ಪ್ರವಾದನೆಗಳು ಮತ್ತು ಅದರ ಪರಿಪೂರ್ಣತೆ

| ನಂ. | ವಾಕ್ಯ ಹೊಂದಿಕೆ | ಪ್ರವಾದನೆಗಳು | ಪರಿಪೂರ್ಣತೆ |
|---|---|---|---|
| 1. | ಆದಿಕಾಂಡ 3:15 | ಸ್ತ್ರೀಯ ವಂಶಾವಳಿ ಯಾಗಿರಬ ಹುದು . | ಲೂಕ 2:7, ಪ್ರಕಟಣೆ 12:5 |
| 2. | ಆದಿಕಾಂಡ 18:18 ಆದಿಕಾಂಡ12:3 | ವಾಗ್ದಾನ ಮಾಡಿದ ಅಬ್ರಹಾಮನ ವಂಶಾವಳಿ. | ಗಲಾತಿಯರು 4:4, ಅಪೋಸ್ತ 3:25(ಮತ್ತಾ 1:1 ಲೂಕ 3:34) |
| 3. | ಆದಿಕಾಂಡ 17:19 | ವಾಗ್ದಾನ ಮಾಡಿದ ಇಸಾಕನ ವಂಶಾವಳಿ. | ಮತ್ತಾಯ 1:2(ಲೂಕ 3:34) |
| 4. | ಅರಣ್ಯಕಾಂಡ 24:17 (ಆದಿಕಾಂಡ 28:14) | ವಾಗ್ದಾನ ಮಾಡಿದ ಯಾಕೋಬ ನ ವಂಶಾವಳಿ. | ಲೂಕ3:34 (ಮತ್ತಾಯ 1:2) |
| 5. | ಆದಿಕಾಂಡ 49:10 | ಯೂದ ಎಂಬ ಕುಲದಲ್ಲಿ ಜನಿಸುವರು. | ಲೂಕ3:33 (ಮತ್ತಾಯ 1:2-3) |
| 6. | ಯೇಶಾಯ 9: 7 (11:1-5, 2ಸಾಮುವೇಲ 7:13) | ದಾವಿದನ ವಂಶಾವಳಿಯಿಂದ ಬ ರುವರು. | ಮತ್ತಾಯ 1:1 (ಮತ್ತಾಯ 1:6) |
| 7. | ಮೀಕನು 5:2 | ಹುಟ್ಟಿದ ಸ್ಥಳ | ಮತ್ತಾಯ 2:1 (ಲೂಕ 2:4-7) |
| 8. | ದಾನಿಯೇಲನು 9:25 | ಹುಟ್ಟಿದ ಸ್ಥಳ | (ಲೂಕ 2:1-2, ಲೂಕ 2:3-7) |
| 9. | ಯೇಶಾಯ 7:14 | ಕನ್ಯೆಯಿಂದ ಜನ್ಮಿಸಿದವ | ಮತ್ತಾಯ1:8(ಲೂಕ1:26-35) |
| 10. | ಯೆರೇಮಿಯ 31:15 | ಚಿಕ್ಕ ಮಕ್ಕಳ ಹತ್ಯೆ | ಮತ್ತಾಯ 2:16-18 |
| 11. | ಹೊಶೇಯನು 11:1 | ಇಜಿಪ್ಟ್‌ಗೆ ತಪ್ಪಿಸಿಕೊಂಡು ಹೋಗಿದ್ದು | ಮತ್ತಾಯ 2:14-15 |
| 12. | ಯೆಶಾಯನು 9:1-2 | ಗಲಿಲಾಯದಲ್ಲಿ ಮಿನಿಸ್ಟ್ರಿ | ಮತ್ತಾಯ 4:12-16 |
| 13. | ಧರ್ಮೋಪದೇಶ ಕಾಂಡ 18:15 | ಪ್ರವಾದಿಯ ಹಾಗೆ . | ಯೋಹಾನ 6:14 (ಅಪೋಸ್ತಲ 3:19-26) |
| 14. | ಕೀರ್ತನೆ 110 : 4 | ಮಹಾಯಾಜಕನ ಹಾಗೆ (ಮೆಲ್ಕಿಜೆದೆಕ್‌ನ ಹಾಗೆ) | ಇಬ್ರಿಯ 6:20 (ಇಬ್ರಿಯ 5:5-6, 7:15-17) |
| 15. | ಯೆಶಾಯ 53:3 (ಕೀರ್ತನೆ 2:2) | ಯೆಹೋದ್ಯರಿಂದ ಅವನ ತಿರಸ್ಕಾರ | ಯೋಹಾನ 1:11 (ಯೋಹಾನ 5:43 ಲೂಕ 4:29, 17:25, 23 :18) |
| 16. | ಯೇಶಾಯ 53 :3 (ಕೀರ್ತನೆ 2:2) | ಅವನ ಕೆಲವು ಗುಣಾವದಿಗಳು | ಲೂಕ 2:52 (ಲೂಕ 4:18) |
| 17. | ಜೆಕಾರಿಯ 9:9 (ಯೆಶಾಯ 62:11) | ಅವರ ವಿಜಯೋತ್ಸವದ ಪ್ರವೇಶ. | ಯೋಹಾನ12:13-14 (ಮತ್ತಾಯ21:1-11, ಯೋಹಾನ 12:12) |
| 18. | ಕೀರ್ತನೆ 41 : 9 | ಸ್ನೇಹಿತದಿಂದ ವಿಶ್ವಾಸ ದ್ರೋಹ. | ಮಾರ್ಕ14:10(ಮತ್ತಾಯ 26:14-16ಮಾರ್ಕ 4:43-45) |
| 19. | ಜೆಕಾರಿಯ 11:12 -13 | 30 ಬೆಳ್ಳಿ ನಾಣ್ಯಕ್ಕೆ ಮಾರಲ್ಪಟ್ಟನು. | ಮತ್ತಾಯ26:15(ಮತ್ತಾಯ 27:3-10) |

| | | | |
|---|---|---|---|
| 20. | ಜೆಕಾರಿಯ 11:13 | ಸ್ಮಶಾನದ ನೆಲಕ್ಕೆ ಹಣವನ್ನು ಓಂದಿರಗಿಸಬೇಕಾಗಿದೆ. | ಮತ್ತಾಯ 27: 6-7, 27 : 3-5, 8-10) |
| 21. | ಕೀರ್ತನೆ 109:7-8 | ಯೂದನ ಸ್ಥಾನವು ಮತ್ತೊಬ್ಬರಿಂದ ತೆಗೆದುಕೊಳ್ಳಲ್ಪಟ್ಟಿತ್ತು. | ಅಪೋಸ್ತಲರು 1:16-20 |
| 22. | ಕೀರ್ತನೆ 27 :12, 35 :11 | ಸುಳ್ಳು ಅಪಾದನೆ ಅವನ ಮೇಲೆ ಹೊರಿಸಲಾಯಿತು. | ಮತ್ತಾಯ 26 : 60-61 |
| 23 | ಯೆಶಾಯ53:7.ಕೀರ್ತನೆ 38:13-14 | ಆಪಾದನೆ ಹೊರೆಸಿದಾಗ ಮೌನವಾಗಿದ್ದನು. | ಮತ್ತಾಯ26:62-63, 27:12-14 |
| 24. | ಯೆಶಾಯ 50 : 6 | ಚುಚ್ಚಲ್ಪಟ್ಟರು ಮತ್ತು ಉಗಿಯಲ್ಪಟ್ಟರು. | ಮಾರ್ಕ14:65,15:17, ಯೋಹಾನ 19:1-3 |
| 25. | ಕೀರ್ತನೆ 69:9(109: 3-5) | ಕಾರಣವಿಲ್ಲದೆ ದ್ವೇಷಿಸಲ್ಪಟ್ಟರು. | ಯೋಹಾನ 15: 23 -25 |
| 26. | ಯೆಶಾಯ 53 : 4-5, 6,12 | ಮತ್ತೊಬ್ಬರಿಗೊಸ್ಕರ ಪ್ರಯಾಸಪಟ್ಟರು. | ಮತ್ತಾಯ8:16-17, ರೋಮಾಪುರ4:25, 1 ಕೋರಿಂಥ 15:3 |
| 27. | ಯೆಶಾಯ 53 : 12 | ಪಾಪಿಗಳ ಜೊತೆ ಶಿಲುಬೆಗೇರಿಸಲ್ಪಟ್ಟರು. . | ಮತ್ತಾಯ 27:38, ಮಾರ್ಕ 15 : 27 - 28 |
| 28. | ಕೀರ್ತನೆ22:16(ಜೆಕಾರಿಯಾ 12:10) | ಕೈಗಳು ಮತ್ತು ಕಾಲುಗಳು ಚುಚ್ಚಲ್ಪಟ್ಟವು. | ಮತ್ತಾಯ 19:37, 20:25-27 |
| 29. | ಕೀರ್ತನೆ 22:6-8 | ಬ ಹಳವಾಗಿ ಹಾಸ್ಯಮಾಡಿ, ಕೀಳಾಗಿ ನೋಡಲಾಯಿತು. | ಮತ್ತಾಯ 27 : 39 - 40 |
| 30. | ಕೀರ್ತನೆ 69 : 21 | ಹುಳಿರಸವನ್ನು ಕೊಡಲಾಯಿತು. | ಯೋಹಾನ 19 : 29 |
| 31. | ಕೀರ್ತನೆ 22 : 8 | ಮತ್ತೆ ಮತ್ತೆ ಪ್ರವಾದನೆಯ ಮಾತುಗಳನ್ನು ಪರಿಹಾಸ್ಯವಾಗಿ ಕೇಳಿಸಿ ಕೊಂಡನು. | ಮತ್ತಾಯ 27 : 43 |
| 32. | ಕೀರ್ತನೆ 109 : 4 | ತನ್ನ ಶತ್ರುಗಳಿಗೋಸ್ಕರ ಪ್ರಾರ್ಥಿಸುತ್ತಾನೆ. | ಲೂಕ 23 :34 |
| 33. | ಜೆಕೆರಿಯಾ 12 : 10 | ಆತನ ಪಕ್ಕೆಲುಬ ುಗಳು ಚುಚ್ಚಲ್ಪಟ್ಟಿತ್ತು. | ಯೋಹಾನ 19 : 34 |
| 34. | ಕೀರ್ತನೆ 22 : 18 | ಸೈನಿಕರು ಆತನ ಬ ಟ್ಟೆಗಳನ್ನು ಹರಾಜು ಹಾಕುತ್ತಾರೆ. | ಮಾರ್ಕ 15 : 24 |
| 35. | ಕೀರ್ತನೆ 34 : 20 | ಒಂದು ಮೂಳೆ ಕೂಡ ಒಡೆಯ ಕೂಡದು. | ಯೋಹಾನ 19 : 33 |
| 36. | ಯೆಶಾಯ 53 :9 | ಶ್ರೀಮಂತರೊಡನೆ ಹೂಣಲ್ಪಡಬೇಕು. | ಮತ್ತಾಯ 27:57-60 |
| 37. | ಕೀರ್ತನೆ 16 : 10 | ಆತನ ಪುನರುತ್ಥಾನ | ಮತ್ತಾಯ 28:9 |
| 38. | ಕೀರ್ತನೆ 68 : 18 | ಅವರ ಅರೋಹಣ | ಲೂಕ 24 : 50-51 |